**ಕನ್ನಡ ನುಡಿ**

ಆಗಸ್ಟ್-ನವೆಂಬರ್-೨೦೧೮

● ಸಂಪುಟ : ೮೩ ● ಸಂಚಿಕೆ : ೮,೯,೧೦,೧೧

ಅಧ್ಯಕ್ಷರು
**ಡಾ. ಮನು ಬಳಿಗಾರ್**

ಗೌರವ ಕಾರ್ಯದರ್ಶಿಗಳು
**ಡಾ. ರಾಜಶೇಖರ ಹತಗುಂದಿ**
**ವ.ಚ. ಚನ್ನೇಗೌಡ**

ಗೌರವ ಕೋಶಾಧ್ಯಕ್ಷರು
**ಪಿ. ಮಲ್ಲಿಕಾರ್ಜುನಪ್ಪ**

ಸಂಪಾದಕರು
**ಬಿ.ಎನ್. ರಮೇಶ್**

ಮುಖಪುಟ ವಿನ್ಯಾಸ : **ಅವಿನಾಶ್ ಕೆ.ಎನ್.**

**ನುಡಿ ಹೂರಣ**

▶ ಅಧ್ಯಕ್ಷರ ನುಡಿ : ಕರ್ನಾಟಕ ಎಂದೆಂದಿಗೂ ಒಂದೇ ೦೧
▶ ಸಾಹಿತ್ಯ ಪರೀಕ್ಷೆ ಪ್ರಕಟಣೆ ೦೨
▶ ಸಂಪಾದಕೀಯ : ಚಂದ್ರಶೇಖರ ಕಂಬಾರ ಹಲವು ಪ್ರತಿಭೆಗಳ ಆಗರ ೦೩
▶ ಕನ್ನಡ ನಂಬಿಕೆಯ ಭಾಷೆಯಾಗಬೇಕು : ಕಂಬಾರ (ಸಮ್ಮೇಳನಾಧ್ಯಕ್ಷರ ಸಂದರ್ಶನ) ೦೪
▶ ೪, ೫ ಹಾಗೂ ೬ ಜನವರಿ , ೨೦೧೯ ೮೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಧಾರವಾಡ. ೦೬

ಬೆಲೆ : ಒಂದು ರೂಪಾಯಿ

**ವಿಳಾಸ :**

**ಕನ್ನಡ ನುಡಿ** ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು – ೫೬೦ ೦೧೮
ದೂರವಾಣಿ : ೨೬೬೧೨೯೯೧-೨೬೬೨೩೫೮೪
ದೂರಪತ್ರಕ : ೨೨೪೨೩೮೬೭
ವೆಬ್‌ಸೈಟು : http://www.kasapa.in
ಇಮೇಲ್ : kannadaparishattu@gmail.com



# ಕರ್ನಾಟಕ : ಎಂದೆಂದಿಗೂ ಒಂದೇ

ಆತ್ಮೀಯರೇ,

ಕನ್ನಡದ ಮಹಾಜಾತ್ರೆ ೨೦೧೯ರ ಜನವರಿ ೪, ೫, ೬ ರಂದು ಧಾರವಾಡದಲ್ಲಿ ಸಮಾವೇಶಗೊಳ್ಳಲಿದೆ. ಮುಂಬಯಿ ಪ್ರಾಂತದ ಭಾಗವಾಗಿದ್ದ ಧಾರವಾಡ ಸುತ್ತಲಿನ ಜಿಲ್ಲೆಗಳ ಜನರ ಕನ್ನಡದ ಕೆಚ್ಚು ಸದಾ ಜಾಗೃತವಾಗಿದೆ. ಹಾಗೆ ನೋಡಿದರೆ, ಅಖಂಡ ಕರ್ನಾಟಕದ ಕನಸು ಕಂಡವರಲ್ಲಿ ಅವಿಭಜಿತ ಧಾರವಾಡ ಜಿಲ್ಲೆಯ ಮಹನೀಯರೇ ಮುಂಚೂಣಿಯಲ್ಲಿದ್ದರು. ಹಚ್ಚೇವು ಕನ್ನಡದ ದೀಪ, ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು.... ಒಂದೇ ಒಂದೇ ಕರ್ನಾಟಕ ಒಂದೇ – ಎಂದು ಮನದುಂಬಿ ಹಾಡಿದವರು ಈ ಭಾಗದವರೆ.

ಕರ್ನಾಟಕ ಏಕೀಕರಣದ ಕನಸು ನನಸಾಗಿಸಲು ಬಹುದೊಡ್ಡ ಸಂಗ್ರಾಮವೇ ಆಗಬೇಕಾಯಿತು. ಏಕೀಕರಣದ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಎಲ್ಲ ಸಾಹಿತಿ, ಕಲಾವಿದರು, ನಾಡಪ್ರೇಮಿಗಳು ಪ್ರಾತಃಸ್ಮರಣೀಯರು. ಆಲೂರು ವೆಂಕಟರಾವ್, ದೊಡ್ಡಮೇಟಿ ಅಂದಾನೆಪ್ಪ, ರಂಗನಾಥ ದಿವಾಕರ, ಹಳ್ಳಿಕೇರಿ ಗುದ್ಲೆಪ್ಪ, ರಂಜಾನ್ ಸಾಬ್, ಅದರಗುಂಚಿ ಶಂಕರಗೌಡ, ಜಿನರಾಜ ಹೆಗಡೆ, ಕೋ.ಲ. ಕಾರಂತ, ಪಾಟೀಲ ಪುಟ್ಟಪ್ಪ, ಮುಂತಾಗಿ ಏಕೀಕರಣಕ್ಕಾಗಿ ದುಡಿದ ಆ ಎಲ್ಲ ಮಹನೀಯರನ್ನು ಕನ್ನಡ ಸಾಹಿತ್ಯ ಪರಿಷತ್ತು ಕೃತಜ್ಞಾಪೂರ್ವಕವಾಗಿ ಸ್ಮರಿಸುತ್ತದೆ. ಅಖಂಡ ಕರ್ನಾಟಕದ ಭಾಗವಾಗಬೇಕೆಂಬ ಉತ್ಕಟ ಹಂಬಲ ಉತ್ತರ ಕರ್ನಾಟಕದವರಿಗೇ ಜಾಸ್ತಿ ಇತ್ತು. ಆದರೆ ಹಿರಿಯ ರಾಜಕೀಯ ಧುರೀಣ ಕೆಂಗಲ್ ಹನುಮಂತಯ್ಯ, ರಾಷ್ಟ್ರಕವಿ ಕುವೆಂಪು, ಅಂದಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರ ಇತ್ಯಾತ್ಮಕ ಪ್ರತಿಸ್ಪಂದನ ದೊರೆಯದೇ ಹೋಗಿದ್ದರೆ, ಕರ್ನಾಟಕ ಏಕೀಕರಣದ ಕನಸು ಸಾಕಾರಗೊಳ್ಳುವುದು ಸಾಧ್ಯವಿರಲಿಲ್ಲ. ಉತ್ತರ – ದಕ್ಷಿಣದ ಬೇಧ ಮರೆತು ಎಲ್ಲ ಮಹನೀಯರು ಕೈ ಜೋಡಿಸಿದ್ದರಿಂದಲೇ ಅಖಂಡ ಕರ್ನಾಟಕದ ಕನಸು ನನಸಾಯಿತು.

ಹಾಗೆಯೇ ನವ ಮೈಸೂರು ರಾಜ್ಯವೆಂದು ೧.೧೧.೧೯೫೬ರಂದು ಉದಯವಾದ ನಮ್ಮ ಹೊಸ ಕನ್ನಡನಾಡು ಸರಿಯಾಗಿ ಹದಿನೇಳು ವರ್ಷಗಳ ನಂತರ ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸುರವರ ದೃಢಸಂಕಲ್ಪದಿಂದಾಗಿ 'ಕರ್ನಾಟಕ' ಎಂಬ ಅಭಿದಾನ ಪಡೆಯಿತು.

ಧಾರವಾಡ ಸಂಗೀತದ ನೆಲೆವೀಡು. ಪಂ. ಭೀಮಸೇನ ಜೋಶಿಯವರು ಭಾರತರತ್ನಕ್ಕೆ ಭಾಜನರಾದರೆ, ಡಾ. ಗಂಗೂಬಾಯಿ ಹಾನಗಲ್, ಡಾ. ಮಲ್ಲಿಕಾರ್ಜುನ ಮನ್ಸೂರ್, ಡಾ. ಬಸವರಾಜ ರಾಜಗುರು, ಪಂ. ಕುಮಾರ ಗಂಧರ್ವ, ಪಂ. ಪುಟ್ಟರಾಜ ಗವಾಯಿಗಳು ಪದ್ಮಭೂಷಣ/ವಿಭೂಷಣಗಳ ಗರಿಯನ್ನು ಮುಡಿಗೇರಿಸಿಕೊಳ್ಳುತ್ತಾರೆ. ಅಂತೆಯೆ ಧಾರವಾಡ ಸಿತಾರವಾದಕರ ತವರೂರೂ ಆಗಿದೆ. ಇವರೆಲ್ಲರಿಂದ ಧಾರವಾಡ ಅಂತರರಾಷ್ಟ್ರೀಯ ಖ್ಯಾತಿ ಪಡೆಯುತ್ತದೆ. ಜಾತ್ಯಾತೀತ ಪರಂಪರೆಗೆ ಮಾದರಿಯಾಗುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಬಿತ್ತಿದ ಸಂಗೀತ ಕಲೆಯ ಬೀಜ ಧಾರವಾಡದಲ್ಲಿ ಸಮೃದ್ಧ ಫಲ ನೀಡುತ್ತದೆ. ಇದೊಂದು ಸೀಮಾತೀತ ಪವಾಡ.

ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಸಂಗೀತಕ್ಕೆ ಹೆಸರುವಾಸಿಯಾದ ಧಾರವಾಡ ಅಸಂಖ್ಯಾತ ಖ್ಯಾತನಾಮ ಕವಿಗಳನ್ನು, ಶಿಕ್ಷಣತಜ್ಞರನ್ನು, ಸಂಗೀತಗಾರರನ್ನು, ಚಿತ್ರಕಲಾವಿದರನ್ನು,



ಹೋರಾಟಗಾರರನ್ನು ಸೃಷ್ಟಿಸಿದೆ. ಜ್ಞಾನಪೀಠಕ್ಕೆ ಭಾಜನರಾದ ಡಾ. ದ.ರಾ. ಬೇಂದ್ರೆ, ಡಾ. ವಿ. ಕೃ. ಗೋಕಾಕ, ಡಾ. ಗಿರೀಶ ಕಾರ್ನಾಡ, ಡಾ. ಚಂದ್ರಶೇಖರ ಕಂಬಾರರು ಧಾರವಾಡದ ಸಾಂಸ್ಕೃತಿಕ ಪರಿಮಳದ ಘಮದಲ್ಲಿ ಮಿಂದೆದ್ದವರು. ಹಾಗೆಯೇ ಡೆಪ್ಯುಟಿ ಚೆನ್ನಬಸಪ್ಪ, ರಾ.ಹ. ದೇಶಪಾಂಡೆ, ಫ.ಗು. ಹಳಕಟ್ಟಿ, ಕೆ.ಎಲ್.ಇ. ಸಂಸ್ಥೆಯನ್ನು ಕಟ್ಟಿದವರು, ಬೆಟಗೇರಿ ಕೃಷ್ಣಶರ್ಮ, ನಾಗನೂರು ಶಿವಬಸವ ಸ್ವಾಮೀಜಿ, ಸರ್. ಸಿದ್ದಪ್ಪ ಕಂಬಳಿ, ಲಿಂಗರಾಜ ದೇಸಾಯಿ, ಶಂ.ಬಾ. ಜೋಶಿ, ಡಿ.ಸಿ. ಪಾವಟೆ, ಬಸವರಾಜ ಕಟ್ಟಿಮನಿ, ಎಂ.ಎಂ. ಕಲಬುರ್ಗಿ ಮುಂತಾದವರು ಆಧುನಿಕ ಕನ್ನಡ ಕಟ್ಟಿದ ಈ ಭಾಗದ ಮಹಾಮಹಿಮರು.ಭಾರತ ಸ್ವಾತಂತ್ರ್ಯಾಂದೋಲನ, ಕರ್ನಾಟಕ ಏಕೀಕರಣ, ಮಹಾಜನ್ ವರದಿ ಆಗ್ರಹ, ಜೆ.ಪಿ. ಆಂದೋಲನ, ಗೋಕಾಕ್ ಚಳವಳಿ ಹೀಗೆ ಹಲವು ಹತ್ತು ಜನಪರ ಹೋರಾಟಗಳ ಶಕ್ತಿಭೂಮಿ ಈ ಧಾರವಾಡ. ಕರ್ನಾಟಕ ಏಕೀಕರಣಗೊಳ್ಳುವ ಮುಂಚೆಯೂ 'ಧಾರವಾಡ' ರಾಜ್ಯದ ಎಲ್ಲ ಸಾಹಿತಿ ಕಲಾವಿದರನ್ನು ಒಂದುಗೂಡಿಸುವ ಆಯಸ್ಕಾಂತೀಯ ಗುಣ ಪಡೆದಿತ್ತು. ಧಾರವಾಡದಲ್ಲಿ (೧೯೫೭) ಜರುಗಿದ ೩೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ರಾಷ್ಟ್ರಕವಿ ಕುವೆಂಪು ಅವರು ಸಮ್ಮೇಳನಾಧ್ಯಕ್ಷರಾದದ್ದು ಕನ್ನಡ ಸಾಹಿತ್ಯ ಪರಿಷತ್ತಿನ ದೂರದೃಷ್ಟಿಯ ಪ್ರತೀಕ. ಕರ್ನಾಟಕದ ಎಲ್ಲ ಪ್ರದೇಶಗಳನ್ನು ಭಾವನಾತ್ಮಕವಾಗಿ ಬೆಸೆಯುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅವಿರತವಾಗಿ ಶ್ರಮಿಸುತ್ತಾ ಬಂದಿದೆ.

೨೦೧೯ರ ಜನವರಿ ೪, ೫, ೬ರಂದು ಧಾರವಾಡದಲ್ಲಿ ಜರುಗಲಿರುವ ೮೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕನ್ನಡದ ಹಿರಿಯ ಕವಿ, ನಾಟಕಕಾರ ಡಾ. ಚಂದ್ರಶೇಖರ ಕಂಬಾರರು ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಜಾಗತೀಕರಣಕ್ಕೆ ಪರ್ಯಾಯವಾದ 'ಶಿವಾಪುರ'ವನ್ನು ಕನ್ನಡ ಸಾರಸ್ವತ ಲೋಕದ ಮುಂದಿಟ್ಟ ಡಾ. ಚಂದ್ರಶೇಖರ ಕಂಬಾರರು ಅಪ್ಪಟ ದೇಶಿ ಪ್ರತಿಭೆ. ಅವರ ಆಯ್ಕೆಯನ್ನು ಕನ್ನಡದ ಸಮಸ್ತರು ಸ್ವಾಗತಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎಂಬುದನ್ನು ಕ್ರಿಯೆಯ ಮೂಲಕ ಪ್ರತಿ ಹಂತದಲ್ಲೂ ರುಜುವಾತು ಪಡಿಸುತ್ತಿದೆ. ಆ ಕಾರಣಕ್ಕೆ ಇರಬೇಕು ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳಿಗೆ ಲಕ್ಷ ಲಕ್ಷ ಸಂಖ್ಯೆಯಲ್ಲಿ ಕನ್ನಡಿಗರು ಹಂಬಲಿಸಿ ಬರುತ್ತಿರುತ್ತಾರೆ. ಕನ್ನಡದ ಈ ಮಹಾಜಾತ್ರೆಗೆ ಸಮಸ್ತ ಕನ್ನಡಿಗರನ್ನು ಸ್ವಾಗತಿಸುತ್ತೇನೆ. ಕನ್ನಡ ನಾಡು-ನುಡಿ, ನೆಲ-ಜಲ ಕುರಿತ ಚಿಂತನ ಮಂಥನಗಳಿಗೆ ಈ ಸಮ್ಮೇಳನ ವಿಶಿಷ್ಟ ಹಾಗೂ ವಿಭಿನ್ನ ಆಯಾಮಗಳಲ್ಲಿ ವೇದಿಕೆಯೊದಗಿಸಿದೆ. ಎಲ್ಲರನ್ನೂ ಒಳಗೊಳ್ಳುವ ಮೂಲಕವೇ ಕನ್ನಡದ ರಥವನ್ನು ಮುನ್ನಡೆಸಬೇಕಿದೆ.

**(ಡಾ. ಮನು ಬಳಿಗಾರ್)**
ಅಧ್ಯಕ್ಷರು

## ಸಾಹಿತ್ಯ ಪರೀಕ್ಷೆ ಪ್ರಕಟಣೆ

ಕನ್ನಡ ಸಾಹಿತ್ಯ ಪರಿಷತ್ತಿನ ೨೦೧೮-೧೯ನೇ ಸಾಲಿನ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆಗಳು **೨೦೧೯, ಜನವರಿ ೧೧, ೧೨ ಮತ್ತು ೧೩ರಂದು** ಒಟ್ಟು ೩ ದಿನಗಳ ಕಾಲ ರಾಜ್ಯದ ೧೯ ಕೇಂದ್ರಗಳಲ್ಲಿ ನಡೆಯಲಿವೆ. ಪರೀಕ್ಷಾ ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದೆ. ೨೯-೧೨-೨೦೧೮ರ ನಂತರವೂ ಪ್ರವೇಶಪತ್ರ ತಲುಪದಿರುವ ಬಗ್ಗೆ ವಿದ್ಯಾರ್ಥಿಗಳು ಗೌರವ ಕಾರ್ಯದರ್ಶಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮ ಇವರಲ್ಲಿ ವಿಚಾರಿಸಬಹುದು. ಬೇರೆ ಜಿಲ್ಲೆಯವರಿಗೆ ಪ್ರವೇಶ ಪತ್ರ ತಲುಪದಿದ್ದಲ್ಲಿ ನೇರವಾಗಿ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬಹುದು. ಪರೀಕ್ಷಾ ಕೇಂದ್ರದ ವಿಳಾಸವನ್ನು ದೂರವಾಣಿ ಮೂಲಕ ಪಡೆಯಬಹುದು. **ದೂರವಾಣಿ ಸಂಖ್ಯೆ : ೦೮೦-೨೬೬೨೩೫೮೪.**

**ಪ್ರವೇಶ ಪತ್ರ ಮತ್ತು ಪರೀಕ್ಷಾ ಕೇಂದ್ರಗಳ ವಿಳಾಸವನ್ನು ಅಂತರ್ಜಾಲ ತಾಣ www.kasapa.in ಮೂಲಕ ಸಹ ಪಡೆದುಕೊಳ್ಳಬಹುದು.**

# ಸಂಪಾದಕೀಯ

# ಚಂದ್ರಶೇಖರ ಕಂಬಾರ ಹಲವು ಪ್ರತಿಭೆಗಳ ಆಗರ



ಬಿ.ಎನ್. ರಮೇಶ್

ಆಗ ಚಂದ್ರಶೇಖರ ಕಂಬಾರರು ಇನ್ನೂ ಯುವಕರು. ಧಾರವಾಡದಲ್ಲಿ ಕವಿ ಸಮ್ಮೇಳನವೊಂದು ನಡೆಯುತ್ತಿತ್ತು. ಕಂಬಾರರಿಗೂ ಆಹ್ವಾನ ಬಂದಿತ್ತು, ಹೀಗಾಗಿ ಅವರು ಭಾಗವಹಿಸಿದ್ದರು. ಎಲ್ಲರೊ ಮೆಚ್ಚುವಂತೆ ಕವಿತೆಯೊಂದನ್ನು ಓದಿದ್ದರು. ಖ್ಯಾತ ಕವಿಗಳೊಬ್ಬರು ಆ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಅವರು ಮಾತನಾಡುತ್ತಾ ಗೋಷ್ಠಿಯಲ್ಲಿ ಕಂಬಾರರು ಓದಿದ ಕವಿತೆ ಎಲ್ಲ ಕವಿಗಳಿಗಿಂತ ಭಿನ್ನವಾಗಿದ್ದದ್ದು ಎಲ್ಲರ ಗಮನಕ್ಕೆ ಬಂದಿದ್ದರೂ, ಇವರ ಬಗ್ಗೆ ಕುಹಕದ ಮಾತುಗಳನ್ನಾಡಿದ್ದರು. 'ಕಬ್ಬಿಣ ಕಾಯಿಸುವವರೂ ಈಗ ಕಾವ್ಯ ಬರೆಯುತ್ತಿದ್ದಾರೆ' ಎಂಬ ಅಧ್ಯಕ್ಷರ ಮಾತು ಕಂಬಾರರ ಸ್ವಾಭಿಮಾನವನ್ನೇ ಬಡಿದೆಬ್ಬಿಸಿತ್ತು. ಅಂದೇ ಕಂಬಾರರು ಕಾವ್ಯವನ್ನು ಇನ್ನಷ್ಟು ಪಳಗಿಸಿಕೊಳ್ಳಲು ನಿರ್ಧರಿಸಿದ್ದರಂತೆ.

ಮುಂದೆ ಕಂಬಾರರು ಜ್ಞಾನಪೀಠದೆತ್ತರಕ್ಕೆ ಏರಿದ್ದು, ಎಲ್ಲರಿಗೂ ಗೊತ್ತಿದೆ. ಈಗ ಅದೇ ಧಾರವಾಡದಲ್ಲಿ ನಡೆಯುತ್ತಿರುವ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ.

ಜಾನಪದ ಸೊಗಡನ್ನು ತಮ್ಮ ಬರವಣಿಗೆಯಲ್ಲಿ ಮೈದಾಳಿಸಿಕೊಂಡು ಬಂದಿರುವ ಚಂದ್ರಶೇಖರ ಕಂಬಾರರು ಹಲವು ಪ್ರತಿಭೆಗಳ ಸಂಗಮ. ಕವಿ, ನಾಟಕಕಾರ, ಸಂಗೀತ ನಿರ್ದೇಶಕ, ಚಲನಚಿತ್ರ ನಿರ್ದೇಶಕ, ಅಧ್ಯಾಪಕ, ಜಾನಪದ ತಜ್ಞ, ಆಡಳಿತಗಾರ... ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿ ನಾಡು ಈಗ ಗೌರವಿಸುತ್ತಿದೆ.

ಡಾ. ಚಂದ್ರಶೇಖರ ಕಂಬಾರರು ಹುಟ್ಟಿದ್ದು ಜನವರಿ ೨, ೧೯೩೭ ರಂದು. ಬೆಳಗಾವಿ ಜಿಲ್ಲೆ ಘೋಡಿಗೇರಿ ಗ್ರಾಮದ ಬಸವಣ್ಣೆಪ್ಪ ಕಂಬಾರ ಹಾಗೂ ಚೆನ್ನಮ್ಮ ದಂಪತಿಯ ಪುತ್ರನಾಗಿ ಜನಿಸಿದರು. ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಬಿಎ ಮಾಡಿದರು. ೧೯೬೨ರಲ್ಲಿ 'ಕರ್ನಾಟಕ ವಿವಿ'ಯಿಂದ ಎಂ.ಎ ಪದವಿ ಪಡೆದರು. ಭೂಸನೂರುಮಠರ ಮಾರ್ಗದರ್ಶನದಲ್ಲಿ ಜನಪದರಂಗಭೂಮಿ ಬಗ್ಗೆ ವಿಶೇಷ ಅಧ್ಯಯನ ಮಾಡಿ ರಚಿಸಿದ ಪ್ರೌಢ ಪ್ರಬಂಧಕ್ಕೆ ಪಿ.ಎಚ್.ಡಿ. ಲಭಿಸಿತು. ಅನಂತರ ಚಿಕಾಗೋ ವಿಶ್ವವಿದ್ಯಾಲಯದ ವಿಶೇಷ ಆಹ್ವಾನದ ಮೇರೆಗೆ ಅಮೆರಿಕಗೆ ತೆರಳಿ ೧೯೬೮ರಿಂದ ೧೯೭೦ರ ವರೆಗೆ ಜಾನಪದ ಕ್ಷೇತ್ರದ ತಜ್ಞರಾಗಿ ಕೆಲಸಮಾಡಿದರು. ೧೯೮೪–೮೬ರ ಅವಧಿಯಲ್ಲಿ ಫೋರ್ಡ್ ಸಂಸ್ಥೆಯ ಫೆಲೋಶಿಪ್ ಪಡೆದು ಸಾಂಪ್ರದಾಯಿಕ ರಂಗಭೂಮಿ, ಜಾನಪದ ರಂಗಭೂಮಿಗಳೊಂದಿಗೆ ಆಧುನಿಕ ರಂಗಭೂಮಿಯ ಅಂತರ್ ಸಂಬಂಧವನ್ನು ಕುರಿತು ವಿಶೇಷ ಅಧ್ಯಯನ ನಡೆಸಿದರು. ಮುಂದೆ ಡಾ.ಚಂದ್ರಶೇಖರ ಕಂಬಾರರು ಬೆಂಗಳೂರು ವಿವಿ ಅಧ್ಯಾಪಕರಾಗಿ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷ, ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕ, ಹಂಪಿ ಕನ್ನಡ ವಿವಿಯ ಮೊದಲ ಕುಲಪತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ದುಡಿಯುತ್ತಿದ್ದಾರೆ. ೨೦೦೪ ರಿಂದ ೨೦೧೦ರ ವರೆಗೆ ವಿಧಾನ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿರುವ ಇವರು, ಈಗ ಬೆಂಗಳೂರಿನ ಬನಶಂಕರಿಯಲ್ಲಿ ನೆಲೆಸಿದ್ದಾರೆ.

ನ್ಯೂಯಾರ್ಕ್, ಬರ್ಲಿನ್, ಮಾಸ್ಕೋ, ಜಪಾನ್ ಮುಂತಾದೆಡೆಗಳ ಕೆಲವು ವಿ.ವಿ.ಗಳಲ್ಲಿ ಜಾನಪದ ಮತ್ತು ರಂಗಭೂಮಿ ಕುರಿತ ಉಪನ್ಯಾಸಗಳನ್ನು ನೀಡಿರುವ ಹೆಗ್ಗಳಿಕೆ ಇವರದು. ತಮ್ಮ ಊರಿನ ವಾತಾವರಣದಲ್ಲಿನ ಜಾನಪದ ಹಾಡು, ಕುಣಿತ, ನಾಟಕಗಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಅವುಗಳ ಸಂಗ್ರಹ, ಬರವಣಿಗೆಯನ್ನು ರೂಢಿಸಿಕೊಂಡರು. ಉತ್ತರ ಕರ್ನಾಟಕದ ಅದರಲ್ಲೂ ಬೆಳಗಾವಿ, ಧಾರವಾಡದ ಗಂಡುಭಾಷೆಯನ್ನು ಕನ್ನಡ ಸಾಹಿತ್ಯಕ್ಕೆ ಹೊತ್ತು ತಂದರು. ಧಾರವಾಡದ ವರಕವಿ ಡಾ. ದ. ರಾ. ಬೇಂದ್ರೆ ಅವರ ನಂತರ ಭಾಷೆಯನ್ನು ಪರಿಣಾಮಕಾರಿಯಾಗಿ ದುಡಿಸಿಕೊಂಡವರಲ್ಲಿ ಕಂಬಾರರು ಒಬ್ಬರು.

ಕಂಬಾರರು ತಾವೇ ಬರೆದ ಕಾದಂಬರಿಗಳನ್ನು ಚಲನಚಿತ್ರಗಳಾಗಿಸಿದರು. ಕರಿಮಾಯಿ, ಸಂಗೀತಾ, ಕಾಡುಕುದುರೆ ಇವುಗಳಲ್ಲಿ ಪ್ರಮುಖವಾದುವು. ಕಂಬಾರರು ತಮ್ಮ ಚಿತ್ರಗಳಿಗೆ ತಾವೇ ಸಂಗೀತ ನೀಡಿದ್ದಾರೆ. ಕಾಡುಕುದುರೆಯ ಹಿನ್ನಲೆ ಸಂಗೀತದ 'ಕಾಡು ಕುದುರೆ ಓಡಿಬಂದಿತ್ತಾ..' ಹಾಡಿಗೆ ಶಿವಮೊಗ್ಗ ಸುಬ್ಬಣ್ಣ ಅವರಿಗೆ ರಾಷ್ಟ್ರಪತಿಗಳ ಪ್ರಶಸ್ತಿ ತಂದುಕೊಟ್ಟಿತು. 'ಜೀಕೆ ಮಾಸ್ತರ ಪ್ರಣಯ ಪ್ರಸಂಗ' ಕಾದಂಬರಿಯನ್ನು ಕಿರುತೆರೆಗೂ ಅಳವಡಿಸಿದ್ದಾರೆ. ಹತ್ತಾರು ಸಾಕ್ಷ್ಯಚಿತ್ರಗಳನ್ನೂ ನಿರ್ಮಿಸಿರುವ ಕಂಬಾರರು ಉತ್ತಮ ನಾಟಕಕಾರರು. ಜೊತೆಗೆ ಜಾನಪದ ಶೈಲಿಯ ಹಾಡುಗಳಿಗೆ ಜನಪ್ರಿಯರು. ತಾವೇ ಸ್ವತಃ ಹಾಡುಗರೂ ಸಹಾ.

'ಹೇಳತೇನ ಕೇಳ', 'ಸಿರಿಸಂಪಿಗೆ', 'ಬೆಳ್ಳಿಮೀನು', 'ಋಷ್ಯಶೃಂಗ', 'ಕಾಡುಕುದುರೆ', 'ನಾಯಿಕಥೆ', 'ಹರಕೆಯ ಕುರಿ', 'ಹುಲಿಯ ನೆರಳು'. 'ನಾಯಿಕತೆ', 'ಸಾವಿರದ ನೆರಳು', 'ಬೆಳ್ಳಿಮೀನು', 'ಅಕ್ಕಕ್ಕು ಹಾಡುಗಳೆ', 'ಬೋಳೇಶಂಕರ',

.....ಪುಟ ೬ ಕ್ಕೆ

# ಕನ್ನಡ ನಂಬಿಕೆಯ ಭಾಷೆಯಾಗಬೇಕು : ಕಂಬಾರ

## (ಸಮ್ಮೇಳನಾಧ್ಯಕ್ಷರ ಸಂದರ್ಶನ)

**ಗುರು ಡಾ. ಚಂದ್ರಶೇಖರ ಕಂಬಾರರೊಂದಿಗೆ ಸಂವಾದ ಮಾಡುವುದೆಂದರೆ ನಮ್ಮ ಅಂತರಂಗದ ದಿವ್ಯ ಪರಂಪರೆಯ ಜೊತೆಗೆ ಅನುಸಂಧಾನದ ಸಲ್ಲಾಪ ನಡೆಸಿದ ಅನುಭವ ನೀಡುತ್ತದೆ. ಕಳೆದ ನಾಲ್ಕು ದಶಕಗಳಿಂದ ಅವರ ಪಾಠ ಕೇಳುತ್ತಾ, ಕೃತಿಗಳನ್ನು ಓದುತ್ತಾ, ನಾಟಕ ನೋಡುತ್ತಾ, ಹಾಡುಗಳ ಸವಿಯಲ್ಲಿ ನೆಲ ಮುಗಿಲುಗಳ ಉದ್ದಗಲಕ್ಕೆ ಬೆಳೆದವರು ನನ್ನಂಥ ಹಲವಾರು ಜನರು. ಕಂಬಾರರು ಕವಿಯಾಗಿ, ಅಧ್ಯಾಪಕರಾಗಿ, ನಟರಾಗಿ, ಸಂಗೀತಗಾರರಾಗಿ, ವಿಶ್ವವಿದ್ಯಾಲಯದ ಕುಲಪತಿಗಳಾಗಿ, ಶಾಸಕರಾಗಿ, ಪ್ರಸ್ತುತ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಮಾಡಿದ ಕೆಲಸಗಳಿಗೆ ಒಂದು ವಿಶಿಷ್ಟ ಪ್ರತಿಭೆಯ ಸ್ಪರ್ಶವಿದೆ. ಅದು ಈ ನೆಲದ ಮೂಲ ನೆಲೆಗಳಿಂದ ಶೋಧಿಸಿ ಹೊರತಂದ ಜೀವದ್ರವ್ಯ. ಈ ದೇಶದ ಮಹೋನ್ನತ ಜ್ಞಾನಪೀಠ ಪ್ರಶಸ್ತಿಯನ್ನು ಕನ್ನಡಕ್ಕೆ ತಂದಿತ್ತ ಈ ಶಿಖರ ಸೂರ್ಯನನ್ನು ೮೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ನಿಯೋಜಿಸಲಾಗಿದೆ. ಈ ಕಾರಣಕ್ಕೆ ಡಾ. ಮನು ಬಳಿಗಾರ್, ಶ್ರೀ ಪಿ. ಮಲ್ಲಿಕಾರ್ಜುನಪ್ಪ ಅವರ ಅಪೇಕ್ಷೆಯ ಮೇರೆಗೆ ಕಂಬಾರರೊಂದಿಗೆ ಮರು ಸಲ್ಲಾಪ ನಡೆಸುವ ಅವಕಾಶ ದೊರೆಯಿತು. ಕಂಬಾರರಿಗೆ ಸಾವಿರ ಪ್ರಶ್ನೆ ಕೇಳಬಹುದು. ಅವರು ಲಕ್ಷ ಉತ್ತರ ಕೊಡಬಲ್ಲರು. ಆದರೆ ನಮ್ಮ ಸದ್ಯದ ಸಂದರ್ಭದ ಸಂಕೀರ್ಣ ಸಮಸ್ಯೆಗಳ ಬಗ್ಗೆ ಕಂಬಾರರ ವಿಶನ್ ನನಗೆ ಮುಖ್ಯವಾಗಿ; ಅದೇ ರೀತಿಯ ಪ್ರಶ್ನೆಗಳೊಂದಿಗೆ ಮುಖಾಮುಖಿಯಾದೆ. ನನ್ನ ಪ್ರಶ್ನೆಗಳಿಗೆ ಕಂಬಾರರು ಚುಟುಕಾಗಿ, ಖಚಿತವಾಗಿ ಉತ್ತರ ನೀಡಿದರು.**



**■ ಸಂದರ್ಶಕರು : ಎಲ್.ಎನ್. ಮುಕುಂದರಾಜ**

**ಕನ್ನಡ ಭಾಷೆಯ ಸದ್ಯದ ಸವಾಲುಗಳು?**

**ಉತ್ತರ :** ನಮ್ಮ ಕಾಲದಲ್ಲಿ ಕನ್ನಡ ಭಾಷೆಗೆ ಒದಗಿದ ಬಹುಮುಖ್ಯ ಸಂಕಟ ಎಂದರೆ ಕನ್ನಡ ಶಿಕ್ಷಣ. ಅದರಲ್ಲೂ ಸರ್ಕಾರಿ ಶಾಲೆಗಳಲ್ಲಿ ನೀಡುತ್ತಿರುವ ಕನ್ನಡ ಶಿಕ್ಷಣ, ಬ್ರಿಟಿಷರು ಬರುವ ಮೊದಲು ಇಲ್ಲಿ ಶಿಕ್ಷಣದ ಸ್ವರೂಪವೇ ಬೇರೆ ಬಗೆಯಲ್ಲಿ ಇತ್ತು. ನಮ್ಮ ಜನ ಅಕ್ಷರ ಕಲಿಯದಿದ್ದರೂ ಬದುಕನ್ನು ಕಲಿತವರು. ಅವರಿಗೆ ಜನಪದೀಯ ಶಿಕ್ಷಣದ ಸೂಕ್ಷ್ಮಗಳ ಪರಿಚಯವಿತ್ತು. ಶ್ರಮಜೀವಿಗಳಾದ ಅವರು ಮೌಲ್ಯದ ಬದುಕನ್ನು ತಮ್ಮ ನಿತ್ಯದಲ್ಲಿ ಅಳವಡಿಸಿಕೊಂಡಿದ್ದರು.

ಬ್ರಿಟಿಷರು ಬಂದ ಮೇಲೆ ಇಲ್ಲಿನ ಶಿಕ್ಷಣ ಪದ್ಧತಿ ಬದಲಾಯಿತು. ಈ ಬದಲಾದ ಸನ್ನಿವೇಶದಲ್ಲಿ ಎಲ್ಲ ಸಮುದಾಯಗಳಿಗೂ ಶಿಕ್ಷಣ ದೊರೆಯತೊಡಗಿತು. ತನ್ನ ಪ್ರಜೆಗಳನ್ನು ಅಕ್ಷರಸ್ಥರನ್ನಾಗಿ ಮಾಡುವ ಕರ್ತವ್ಯ ಸರ್ಕಾರದ ಮೇಲಿದೆ. ಕಳೆದ ಐದಾರು ದಶಕಗಳಿಂದ ಸರ್ಕಾರ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದೆ. ಹಳ್ಳಿ ಪಟ್ಟಣಗಳಲ್ಲಿ ಶಾಲಾ ಕಾಲೇಜುಗಳು ಪ್ರಾರಂಭವಾದವು. ಇದು ಈಗ ನೆನಪು ಅಷ್ಟೆ. ಸದ್ಯದ ಸಂದರ್ಭದಲ್ಲಿ ಬರುತ್ತಿರುವ ಸರ್ಕಾರಗಳು ಪ್ರತಿ ವರ್ಷ ಶಾಲೆಗಳನ್ನು ಮುಚ್ಚುವ ಅಂಕಿ ಸಂಖ್ಯೆಗಳನ್ನು ಕೊಡುತ್ತಿವೆ. ಎಲ್ಲಾ ಸರ್ಕಾರಗಳೂ ಇದನ್ನು ಮಾಡುತ್ತಿವೆ. ಕನ್ನಡ ಭಾಷೆ, ಕನ್ನಡ ಶಿಕ್ಷಣದ ಬಗ್ಗೆ ಪ್ರೀತಿಯುಳ್ಳ ಜನ ಸರ್ಕಾರವನ್ನು ಕೇಳಿದರೆ, ಸರ್ಕಾರದ ಉತ್ತರವೇ ನಿರುತ್ಸಾಹದಿಂದ ಕೂಡಿರುತ್ತದೆ. ಮುಂದಿನ ದಿನಗಳಲ್ಲಿ ಕನ್ನಡ ಮಾಧ್ಯಮ, ಕನ್ನಡ ಶಾಲೆ ಹಾಗೂ ಸರ್ಕಾರಿ ಶಾಲೆಗಳ ಭವಿಷ್ಯ ಏನಾಗಬಹುದೆಂಬ ಬಹುದೊಡ್ಡ ಪ್ರಶ್ನೆ ನಮ್ಮೆಲ್ಲರನ್ನು ಕಾಡುತ್ತಿದೆ. ಮುಂದೆ ಏನಾಗುತ್ತೆ? ಎಂಬುದು ಕೇವಲ ಪ್ರಶ್ನೆಯಲ್ಲ. ಏನಾದರೂ ಆಗಲು ಸಾಧ್ಯವೆ? ಎಂಬ ಇನ್ನೊಂದು ಪ್ರಶ್ನೆ ಸಮಾಧಾನಕರ ಉತ್ತರದಂತೆ ಉದ್ಭವಿಸುತ್ತದೆ.

ಇದು ಕರ್ನಾಟಕದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಉದ್ಭವಿಸಿರುವ ಪ್ರಶ್ನೆ ಮಾತ್ರವಲ್ಲ. ಇಡೀ ಭಾರತ ದೇಶವೇ ಎದುರಿಸುತ್ತಿರುವ ಬಹುದೊಡ್ಡ ಪ್ರಶ್ನೆ. ಇತರ ರಾಜ್ಯಗಳಲ್ಲೂ ಈ ಸಮಸ್ಯೆ ಎದುರಾಗಿದೆ. ಹಲವು ರಾಜ್ಯ ಸರ್ಕಾರಗಳು ತಮ್ಮ ಮಾತೃಭಾಷಾ ಶಿಕ್ಷಣಕ್ಕಿಂತ, ಇಂಗ್ಲೀಷ್ ಮಾಧ್ಯಮದ ಶಿಕ್ಷಣವೇ ಸರಿ ಇರಬಹುದೆಂಬ ನಿಲುವು ತಾಳುತ್ತಿವೆ.

**ಮಾತೃಭಾಷಾ ಶಿಕ್ಷಣದ ಅಗತ್ಯ?**

**ಉತ್ತರ :** ಕನ್ನಡಿಗರಾದ ನಮ್ಮ ಸಂಸ್ಕೃತಿಯ ಸೂಕ್ಷ್ಮಗಳು ನಿಂತಿರುವುದೆ ನಾವು ಬಳಸುವ ಕನ್ನಡ ಭಾಷೆಯ ತಳಹದಿಯ ಮೇಲೆ. ಕನ್ನಡ ಮಾತ್ರವಲ್ಲ, ಇಡೀ ಇಂಡಿಯಾ ದೇಶದ ಎಲ್ಲಾ ಸಂಸ್ಕೃತಿಗಳೂ ಅಲ್ಲಿನ ನೆಲದ ಮಕ್ಕಳು ನಿತ್ಯ ಉಸಿರಾಡುವ ತಮ್ಮ ಭಾಷೆಯ ಬಲದ ಮೇಲೆ ನಿಂತಿವೆ.

ಭಾಷೆ ಎಷ್ಟು ಮುಖ್ಯ ಅಂದರೆ; ನಾವು ಯೋಚಿಸುವುದು, ಆಚರಿಸುವುದು, ನುಡಿಯುವುದು ನಮ್ಮ ತಾಯಿ ಭಾಷೆಯಲ್ಲಿ. ಈಗ ಆಗುತ್ತಿರುವ ಸ್ಥಿತ್ಯಂತರಗಳನ್ನು ಗಮನಿಸಿ. ಯೋಚಿಸುವುದು ಒಂದು ಭಾಷೆಯಲ್ಲಿ, ಆಚರಣೆಗೆ ಮತ್ತೊಂದು ಭಾಷೆ. ಮಾತನಾಡಲು ಬಳಸುವುದು ಇನ್ನೊಂದು ಭಾಷೆ, ನುಡಿ – ನಡೆ ಜೀವನಗಳ ನಿತ್ಯದಲ್ಲಿ ಬಳಸುವ ನಮ್ಮ ಭಾಷಿಕ ನೆಲೆಗಳು ಸ್ಫೋಟಗೊಂಡಿವೆ. ಇದರಿಂದ ಆಗುವ ಅನಾಹುತಗಳನ್ನು ಕಲ್ಪಿಸುವುದಕ್ಕೂ ಸಾಧ್ಯವಿಲ್ಲ.

**ಮಾತೃಭಾಷಾ ಶಿಕ್ಷಣ, ಕನ್ನಡ ಭಾಷೆಯ ಸಬಲೀಕರಣದ ಹೊಣೆಗಾರಿಕೆ?**

**ಉತ್ತರ :** ಭಾಷೆಯನ್ನು ಉಳಿಸಬೇಕಾದ ಹೊಣೆಗಾರಿಕೆಯನ್ನು ಲೇಖಕರು ಹೊರಬೇಕೆಂಬ ಒಂದು ಒತ್ತಾಯವಿದೆ. ಇದು ಸಹಜವಾದ ಒತ್ತಾಯವೂ ಹೌದು. ಆದರೆ ಲೇಖಕನಿಗೂ ಮಿತಿಗಳಿರುತ್ತವೆ. ಲೇಖಕ ಎಂದಾಕ್ಷಣ ಆತ ಅಪರಿಮಿತ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವನೆಂದು ತಿಳಿಯಬಾರದು. ಇದು ಕೇವಲ ಲೇಖಕನೊಬ್ಬನ ಹೊಣೆಗಾರಿಕೆಯಲ್ಲ.

ನಮ್ಮೆದುರು ಎಲ್ಲ ಪ್ರಜೆಗಳಿಂದ ವೋಟು ಪಡೆದು, ಸರ್ವಶಕ್ತವೂ, ಸಂಪದ್ಭರಿತವೂ ಆದ ಪ್ರಜಾ ಸರ್ಕಾರಗಳಿವೆ. ಭಾಷೆಯನ್ನು ಬದುಕಿಸಬೇಕಾದ ಸಂಪೂರ್ಣ ಜವಾಬ್ದಾರಿ ಸರ್ಕಾರದ ಮೇಲಿರುತ್ತದೆ. ಆ ನಂಬಿಕೆಯ ಕಾರಣದಿಂದಲೇ ಜನ ಸರ್ಕಾರಗಳನ್ನು ಆಯ್ಕೆ ಮಾಡಿರುತ್ತಾರೆ. ಆದರೆ ಒಂದು ವಿಷಾದನೀಯ ವಿಚಾರವೆಂದರೆ ಹೊಣೆಗಾರಿಕೆ ಹೊರಬೇಕಾದ ಸರ್ಕಾರಗಳಿಗೆ ಕನ್ನಡ ಭಾಷೆಯ ಮೇಲೆ ನಂಬಿಕೆಯೇ ಇಲ್ಲ.

**ಸಾಮಾಜಿಕ ಜಾಲತಾಣಗಳೂ ಸೇರಿದಂತೆ ಹಲವು ಮಾಧ್ಯಮಗಳ ಮೂಲಕ ಹೊಸ ಕಾಲದ ಜನ ಸಮುದಾಯಗಳು ಸಾಹಿತಿಗಳಿಂದ ಬಹಳ ನಿರೀಕ್ಷೆ ಇಟ್ಟುಕೊಂಡಿವೆ. ಆದರೆ ಲೇಖಕರ ಬರಹಗಳಿಗೂ, ಬದುಕಿಗೂ ಅಜಗಜಾಂತರ ವ್ಯತ್ಯಾಸವಿದೆ. ನುಡಿಗೂ ನಡೆಗೂ ಭಿನ್ನತೆ ಇದೆ ಎಂಬ ಆರೋಪವೂ ಇದೆ.**

**ಉತ್ತರ :** ಇಂತಹ ಆರೋಪಗಳನ್ನು ಮಾಡುವವರು ಯಾರು ಇದು ಲೇಖಕರ ಬಗ್ಗೆ ಮಾಡುತ್ತಿರುವ ಆರೋಪ ಮಾತ್ರವಲ್ಲ. ಒಟ್ಟು ಸರ್ಕಾರದ ಮೇಲೆ ಮಾಡುತ್ತಿರುವ ಆರೋಪ. ಭಾಷೆ ಹಾಗೂ ಸಾಹಿತ್ಯವನ್ನು ಲಘುವಾಗಿ ಕಾಣುತ್ತಿರುವವರು ಕಾರ್ಪೋರೇಟ್ ವಲಯಕ್ಕೆ

ಸೇರಿದವರು. ಕನ್ನಡ ನಮಗೆ ಅನ್ನ ಹಾಕುತ್ತದೆಯೇ ಎಂದು ಲಘುವಾಗಿ ಮಾತನಾಡುತ್ತಾರೆ. ಕನ್ನಡದಿಂದ ಏನು ಲಾಭ ಎಂಬ ಬೇಜವಾಬ್ದಾರಿ ಮಾತನ್ನು ಆಡುತ್ತಾರೆ. ಕಾರ್ಪೋರೇಟ್ ವಲಯಕ್ಕೆ ಸೇರಿದವರು ಈಗ ಕೇವಲ ಕರ್ನಾಟಕದ ಪ್ರಜೆಗಳಾಗಿ ಉಳಿದಿಲ್ಲ. ಅವರಿಗೆ ಜಗತ್ತಿನ ನಾಗರಿಕತೆ ಬೇಕಾಗಿದೆ. ಅವರು ಇಡೀ ಪ್ರಪಂಚದ ಪ್ರಜೆಗಳಂತೆ ಮಾತನಾಡುತ್ತಿದ್ದಾರೆ. ಹೀಗೆ ಮಾತನಾಡುವ ಮಂದಿಯಿಂದ ಕನ್ನಡದ ಸಮಸ್ಯೆ ಬಿಡಿ; ಯಾವ ಸಮಸ್ಯೆಯೂ ಬಗೆಹರಿಯಲಾರದು.

**ಲೇಖಕರ ಜವಾಬ್ದಾರಿ ಇಲ್ಲವೆ?**

**ಉತ್ತರ :** ಇದೆ, ಅವರು ನಿರಂತರವಾಗಿ ಮಾತನಾಡುತ್ತಲೇ ಇದ್ದಾರೆ. ಅವರ ಗುರಿಯೂ ಸರ್ಕಾರವೇ ಆಗಿರುತ್ತದೆ. ನಾಲ್ಕಾರು ಜನ ಲೇಖಕರು ಧ್ವನಿ ಎತ್ತರಿಸಿ ಮಾತನಾಡಿದ ತಕ್ಷಣವೇ ಸರ್ಕಾರವೂ ಎಚ್ಚರಗೊಳ್ಳುತ್ತದೆ. ಅದು ಮೊದಲು ಮಾಡುವ ಕೆಲಸವೆಂದರೆ ಲೇಖಕರ ಬಾಯಿ ಮುಚ್ಚಿಸುವ ಕೆಲಸ. ಅದು ಸರ್ಕಾರಕ್ಕೆ ಸುಲಭವಾಗಿರುತ್ತದೆ.

**ಕನ್ನಡದ ಭವಿಷ್ಯದ ಬಗ್ಗೆ ನಂಬಿಕೆಯೇ ಇಲ್ಲದ ಸರ್ಕಾರ, ತನ್ನ ವಿರುದ್ಧ ಮಾತನಾಡುವ ಲೇಖಕರಿಗೆ "ತಗೋ ಅಕಾಡೆಮಿ, ತಗೋ ಪ್ರಾಧಿಕಾರ' ಎಂದು ಬಿಡುತ್ತದೆ. ಆಯಿತು, ಅಕಾಡೆಮಿಗಳು, ಪ್ರಾಧಿಕಾರಗಳಿಂದಲಾದರೂ ಏನಾದರೂ ಪ್ರಯೋಜನ ಇದೆಯಾ? ಇಲ್ಲ, ಅದು ಕೇವಲ ಪತ್ರಿಕಾ ಹೇಳಿಕೆ ಕೊಡುವ ಮೂಲಕ ತನ್ನ ಸಿಟ್ಟನ್ನು ತೀರಿಸಿಕೊಳ್ಳಬೇಕು. ಕನ್ನಡ ಭಾಷೆಯು ಉಳಿವು ಹೇಗೆ?**

**ಉತ್ತರ :** ಬಹಳ ಕಷ್ಟ ಪರಿಸ್ಥಿತಿ ನೋಡಿದರೆ ಕನ್ನಡ ಬದುಕೋದೇ ಬಹಳ ಕಷ್ಟಕರವಾಗಿದೆ. ಇದಕ್ಕೆ ಬಹುಮುಖ್ಯ ಕಾರಣ ಸರ್ಕಾರದ ಭಾಷಾ ನೀತಿ. ಸರ್ಕಾರದ ಕನ್ನಡ ಪರವಾದ ನಿಲುವನ್ನು ಗಮನಿಸಿ. ಅದು ಅಭದ್ರವಾಗಿದೆ. ಈ ಅಭದ್ರತೆಯು ಭಾಷೆಯ ಬದುಕಿಗೆ ಬಹುದೊಡ್ಡ ತೊಡಕಾಗಿ ಕಾಣುತ್ತಿದೆ.

**ಸರ್ಕಾರಿ ಕನ್ನಡ ಶಾಲೆಗಳು ಮುಚ್ಚಿ ಹೋದರೆ ಭಾಷೆಯ ಮೇಲಾಗುವ ದುಷ್ಪರಿಣಾಮಕ್ಕಿಂತ ಜನರ ಬದುಕಿನ ಮೇಲೆ ಆಗುವುದಿಲ್ಲವೆ?**

**ಉತ್ತರ :** ಖಂಡಿತ, ಮುಂದಿನ ದಿನಗಳಲ್ಲಿ ಇವೆಲ್ಲ ಬಹುದೊಡ್ಡ ಸಮಸ್ಯೆಯಾಗಿ ಎದುರಾಗಲಿವೆ. ಇದಕ್ಕೆ ಸರ್ಕಾರವೇ ಪರಿಹಾರ ಸೂಚಿಸಬೇಕು, ಹುಡುಕಬೇಕು. ಸರ್ಕಾರಿ ಶಾಲೆಗಳು ಮುಚ್ಚಿದರೆ ಬಡವರ ಮಕ್ಕಳ ಶಿಕ್ಷಣಕ್ಕೆ ಕುತ್ತು ಬರಬಹುದು. ಆಗ ಜನ ನೇರವಾಗಿ ಸರ್ಕಾರವನ್ನೇ ಪ್ರಶ್ನಿಸುತ್ತಾರೆ. ವೋಟು ಹಾಕುವ ಮಂದಿ ಸುಮ್ಮನೆ ಕೂರುವುದಿಲ್ಲ. ಖಾಸಗಿ ಶಾಲೆಗಳು ಕೇಳಬಹುದಾದ ದೊಡ್ಡ ಮೊತ್ತವನ್ನು ಸರ್ಕಾರವೇ ಕಟ್ಟಬೇಕಾದ ಪರಿಸ್ಥಿತಿ ಬರಬಹುದು. ಈಗಲೂ ಕೆಲವು ಆಯ್ದ ಖಾಸಗಿ ಶಾಲೆಗಳಿಗೆ ಸರ್ಕಾರ ಫೀಸು ತುಂಬಿ ಬಡ ಮಕ್ಕಳನ್ನು ಓದಿಸುತ್ತಿಲ್ಲವೆ. ಭಾಷೆಯ ಬಗೆಗೆ ಸರ್ಕಾರಕ್ಕೆ ಬದ್ಧತೆ ಇದ್ದಾಗ ಮಾತ್ರ ಮುಂದಿನ ಪೀಳಿಗೆ ಅದ್ಭುತವಾಗಿ ವಿಕಾಸಗೊಳ್ಳುತ್ತದೆ.

**ವೇದಿಕೆಗಳಲ್ಲಿ ಭಾಷಣ ಬಿಗಿಯುವ ಕನ್ನಡ ಸಾಹಿತಿಗಳೇ ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳುಹಿಸಿತ್ತಿಲ್ಲವೆಂಬ ದೂರೂ ಇದೆಯಲ್ಲ.**

**ಉತ್ತರ :** ದೂರು ಇದೆ. ನಮ್ಮ ಹಲವಾರು ಕನ್ನಡ ಲೇಖಕರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸುತ್ತಿದ್ದಾರೆ. ಕೆಲವರಿಗೆ ಸಾಧ್ಯವಾಗಿಲ್ಲ. ಅದಕ್ಕೆ ಕಾರಣ ಅವರಿಗೆ ಭಾಷಾ ಪ್ರೇಮ ಇಲ್ಲವೆಂದಲ್ಲ. ಮಾತೃ ಭಾಷಾ ಶಿಕ್ಷಣದ ಅಗತ್ಯದ ಅರಿವೂ ಇಲ್ಲವೆಂದಲ್ಲ. ಅದಕ್ಕಾಗಿಯೇ ಕೆಲವರು ಹಠ ಹಿಡಿದು ಕನ್ನಡ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದಾರೆ. ಮತ್ತೆ ಕೆಲವರಿಗೆ ಇರಬಹುದಾದ ಅನಾನುಕೂಲಗಳ ಅನಿವಾರ್ಯತೆಯಿಂದ ಕಳಿಸಲಾಗುತ್ತಿಲ್ಲ.

**ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಲ್ಲಿ ಮೊದಲು ಕುವೆಂಪು, ಎಂಟರಲ್ಲಿ ನೀವಿದ್ದೀರಿ. ಈ ಎರಡು ತುದಿಗಳ ಸಂಬಂಧವೇನು?**

**ಉತ್ತರ :** ಕುವೆಂಪು ಅವರ ಬಗ್ಗೆ ನನಗೆ ಬಹುದೊಡ್ಡ ಗೌರವ ಇದೆ. ಕನ್ನಡ ಸಮಾಜವನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡು, ಅದನ್ನು ಸುಧಾರಣೆ ಮಾಡಿದ ಮಹಾಕವಿ ಅವರು. ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಅವರ ಕೊಡುಗೆ ಅಪಾರ. ವಿಜ್ಞಾನ ಬಲ್ಲ ವಿದ್ವಾಂಸರಿಂದ ಹಳ್ಳಿ ಹಳ್ಳಿಗಳಲ್ಲಿ ಪ್ರಚಾರೋಪನ್ಯಾಸ ಮಾಲೆ ರೂಪಿಸಿದ್ದರು. ನಾಲ್ಕಾಣೆಗೆ ಒಂದು ಪುಸ್ತಕ ದೊರೆಯುವಂತೆ ಮಾಡಿದ್ದನ್ನು ನಾವು ನೆನಪಿಟ್ಟುಕೊಳ್ಳಬೇಕು.

ಕಾವ್ಯ ಭಾಷೆಗೆ ಸಂಬಂಧಿಸಿದಂತೆ ನನಗೂ ಅವರಿಗೂ ಬಹಳ ಅಂತರವಿದೆ. ಕುವೆಂಪು ಅವರದು ಸಂಸ್ಕೃತ ಭೂಯಿಷ್ಠವಾದ ಭಾಷೆ. ನನ್ನದು ಸಹಜವಾದ ಜನಪದ ಮೂಲದ ಭಾಷೆ. ಹಲವು ವಿಚಾರಗಳಲ್ಲಿ ಕುವೆಂಪು ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿದ ಕವಿ.

**ನಿಮ್ಮ ಒಂದೆರಡು ಕೃತಿಗಳ ಕೇಂದ್ರ ಕುರಿತು ಹೇಳಿ?**

**ಉತ್ತರ :** ಕುವೆಂಪು ಅವರಂತೆಯೇ ನಮ್ಮ ವಚನಕಾರರು ನನ್ನ ಮೇಲೆ ಅಗಾಧ ಪ್ರಭಾವ ಬೀರಿದ್ದಾರೆ. ಜಾನಪದೀಯ ಸಹಜ ಚಲನೆ ನನ್ನ ಬರವಣಿಗೆಯಲ್ಲಿದೆ. ಶಿವನ ಡಂಗುರ ಕಾದಂಬರಿಯಲ್ಲಿ ದಲಿತ ಮಹಿಳೆಯನ್ನು ಮದುವೆಯಾಗುವುದು ಕ್ರಾಂತಿಯ ಸಂಕೇತವಲ್ಲ. ಅದು ಸಹಜ ನಡವಳಿಕೆ. ಎಲ್ಲವನ್ನೂ ದೊಡ್ಡ ಮಾತುಗಳಲ್ಲಿ ಹೇಳುವ ಅಗತ್ಯವಿಲ್ಲ. ಸರಳವಾಗಿ ಹೇಳಬೇಕಾಗಿದೆ. ಶಿವರಾತ್ರಿ ನಾಟಕ ಗಮನಿಸಿ. ಅಲ್ಲಿ ಮಹಾರಾಜ ಬಿಜ್ಜಳ ಮತ್ತು ಮಂತ್ರಿ ಬಸವಣ್ಣ ಸಂಧಿಸಿ, ಚರ್ಚೆ ಮಾಡುವುದು ವೇಶ್ಯೆಯ ಮನೆಯಲ್ಲಿ. ಏಕೆಂದರೆ ದೊಡ್ಡ ದೊಡ್ಡ ವಿವಾದಗಳಿಗೆ ಜಡ್ಜ್‌ಮೆಂಟ್ ಕೊಡುವ ಶಕ್ತಿ ಸಾಮಾನ್ಯ ಜನರಿಗೆ ಇರುತ್ತದೆಂಬ ನಿಲುವು ನನ್ನದು. ನೊಂದವರಿಗೆ ಮಾತ್ರ ತೀರ್ಮಾನ ಕೊಡುವ ಅಧಿಕಾರವಿರುತ್ತದೆ. ಅದಕ್ಕೆ ಅಕ್ಕಮಹಾದೇವಿ "ನೊಂದವರ ನೋವ ನೋಯದವರೆತ್ತ ಬಲ್ಲರು?" ಎಂದು ಹೇಳುವುದು.

ಬೋಳೆಶಂಕರ ನಾಟಕ ಉಂಟುಮಾಡುವ ಪರಿಣಾಮವೂ ಇದೇ ನೆಲೆಯಲ್ಲಿದೆ. ಅದು ಟಾಲ್‌ಸ್ಟಾಯ್ ಕತೆಯ ಹಿನ್ನೆಲೆಯಲ್ಲಿ ರೂಪುಗೊಂಡ ನಾಟಕ. ಇದೇ ಮಾದರಿಯ ಜಾನಪದ ಕತೆಯೊಂದು ನಮ್ಮ ಹಾವೇರಿ ಭಾಗದಲ್ಲಿ ದೊರೆಯುತ್ತದೆ. ಬೋಳೆಶಂಕರ ಕೂಡ ಸರಳವಾಗಿ ಬದುಕುವ, ಸರಳವಾಗಿ ಯೋಚಿಸುವ ಸಹಜ ಮನುಷ್ಯ. ಇದೇ ಲೋಕದ ತಾತ್ವಿಕತೆ ಎಂಬ ನಂಬಿಕೆ ಸೃಷ್ಟಿಸುವ ಕೃತಿ ಅದು.

ಜನಪದ ಸಂಸ್ಕೃತಿಗೂ, ವೈದಿಕ ಸಂಸ್ಕೃತಿಗೂ ಇರುವ ವ್ಯತ್ಯಾಸವನ್ನೂ ಈ ಮೂಲಕ ಗುರುತಿಸಬಹುದು. "ನಮ್ಮ ದೇಶ ಮೂಢನಂಬಿಕೆಗಳ ದೇಶ, ದೇವರನ್ನು ನಂಬುವ ದೇಶ" ಎಂದು ನೈಪಾಲ್ ಹೇಳುತ್ತಾರೆ. ಹೌದು, ನಮ್ಮ ಜನ ಇತಿಹಾಸ ನಂಬೋಲ್ಲ, ಪುರಾಣ ನಂಬುತ್ತಾರೆ. ನಂಬಿಕೆಗಳು ಹೆಚ್ಚಾದರೆ ಹಾನಿ ಏನೂ ಆಗುವುದಿಲ್ಲ. ರಾಮ ಅಯೋಧ್ಯೆಯಲ್ಲೇ ಇದ್ದ ಎನ್ನುವುದು ಇತಿಹಾಸದ ಮಾತಾದರೆ; ರಾಮ ನಮ್ಮ ಹೃದಯಗಳಲ್ಲೇ ಇದ್ದಾನೆ ಎಂಬುದು ಮಿಥ್. ನಮಗೆ ಈ ಎರಡೂ ಬೇಕು.

ಜನತೆಯ ನೆನಪುಗಳ ಬಗ್ಗೆ ಮತ್ತು ಕನಸುಗಳ ಬಗ್ಗೆ ನಮಗೆ ಗೌರವ ಇರಬೇಕು. ದೈವಗಳನ್ನು ಪ್ರಶ್ನಿಸುವ ಹಕ್ಕು ನಮಗಿಲ್ಲದಂತಾಗಿದೆ. ಮಹಮದ್ ಗವಾನ್ ನಾಟಕದಲ್ಲಿ ಮುಸ್ಲಿಮನಾದ ಗವಾನ್‌ಗೆ ವಿಠಲ ಪ್ರತ್ಯಕ್ಷವಾಗಿ ಮಾತನಾಡುತ್ತಾನೆ. ದೇವರಿಗೆ ಜಾತಿ ಮತ ಧರ್ಮಗಳ ಸೋಂಕಿಲ್ಲ. ಆದರೆ ಜನರಿಗೆ ಇದೆಲ್ಲ ಇದೆ. ಹಾಗಾಗಿ ಗವಾನ್ ಬಗ್ಗೆ ಜನ ಹೊಟ್ಟೆ ಕಿಚ್ಚು ಪಡುತ್ತಾರೆ.

**ಕನ್ನಡ ಕಾವ್ಯ ಪರಂಪರೆಯ ಸೂಕ್ಷ್ಮಗಳ ಬಗ್ಗೆ ಹೇಳಿ.**

**ಉತ್ತರ :** ಹತ್ತನೆಯ ಶತಮಾನದ ಪಂಪ, ರನ್ನ ಮುಂತಾದ ಚಂಪೂ ಕವಿಗಳು ರಾಜನ ಆಸ್ಥಾನದಲ್ಲಿದ್ದರು. ಆಸ್ಥಾನದ ವಿದ್ವಾಂಸರನ್ನು ಮೆಚ್ಚಿಸಲು ಕಾವ್ಯ ಬರೆದರು. ವಚನಕಾರರು ಹಾಗಲ್ಲ, ಅವರು ಜನರ ನಡುವೆ ಇದ್ದರು. ದೇವರನ್ನು ನೇರವಾಗಿ ಪ್ರಶ್ನಿಸುವ, ಪ್ರಶಂಸಿಸುವ, ನೋವು ತೋಡಿಕೊಳ್ಳುವ ರೀತಿಯಲ್ಲಿ ವಚನಗಳನ್ನು ಬರೆದರು. ಆನಂತರ ಹರಿಹರ ರಾಘವಾಂಕರು ಜನ ಬದುಕಲೆಂದು ನಿರ್ಣಯಿಸಿ ಕಾವ್ಯ ಬರೆದರು. ಅವರು ಸಮುದಾಯಗಳ ಬಗೆಗೆ ಕಾಳಜಿಯುಳ್ಳ ಕವಿಗಳಾಗಿದ್ದರು. ಮುದ್ದಣನವರೆಗೆ ಈ ಪ್ರಜ್ಞೆ ಮುಂದುವರೆಯುತ್ತವೆ. ನವ್ಯರು ಸಮುದಾಯ ಪ್ರಜ್ಞೆಗಿಂತ ಮಿಗಿಲಾಗಿ ವ್ಯಕ್ತಿ ಪ್ರಜ್ಞೆಯ ಕಡೆಗೆ ತಮ್ಮ ದೃಷ್ಟಿ ಹರಿಸಿದರು – ಅಡಿಗರೇ, ಕಾವ್ಯ ಇರುವುದು ಇಬ್ಬರು ವ್ಯಕ್ತಿಗಳ ನಡುವಿನ ಸಂಬಂಧಕ್ಕಾಗಿ ಎಂದು ನಂಬಿದ್ದರು. ಇದೇ ಕಾಲದಲ್ಲಿ ಬರೆದ ನನಗೆ ಕಾವ್ಯ ವೈಯಕ್ತಿಕ ಅಲ್ಲ; ಅದು ಸಮುದಾಯದ ಅಭಿವ್ಯಕ್ತಿ ಎಂಬ ನಂಬಿಕೆ ಇತ್ತು. ಹಾಗಾಗಿ ನಾನು ನಮ್ಮ ಹಿಂದಿನ ಪರಂಪರೆಯತ್ತ ಮುಖ ಮಾಡಿ ಕಮ್ಯೂನಿಟಿಗಾಗಿ ಸಾಹಿತ್ಯ ರಚಿಸಿದೆ.

**ಕನ್ನಡ ಸೃಜನಶೀಲತೆಯ ಮುಂದಿನ ಪಯಣ**

**ಉತ್ತರ :** ಈಗ ಕೇವಲ ಕನ್ನಡಿಗರಿಗಾಗಿ ಕಾವ್ಯ

ಬರೆಯಲು ಸಾಧ್ಯವಿಲ್ಲ. ಏಕೆಂದರೆ ನಮ್ಮ ಕಾಲದ ಲೇಖಕರ ಪ್ರಜ್ಞೆ ಇಡೀ ದೇಶಕ್ಕೆ ವ್ಯಾಪಿಸಿಕೊಳ್ಳತೊಡಗಿದೆ. ಹಾಗಾಗಿ ದೇಶ ಪ್ರಜ್ಞೆಯನ್ನಿಟ್ಟುಕೊಂಡು ಕಾವ್ಯ ರಚನೆ ಮಾಡಬೇಕು. ಅದೂ ಸಮಾಧಾನ ತರುವುದಿಲ್ಲ. ನಮ್ಮ ಕಣ್ಣೆದುರು ಪ್ರಪಂಚವೇ ಹರಡಿಕೊಂಡಿದೆ. ನಮ್ಮ ಸೃಜನಶೀಲತೆಯ ನೆಲೆಗಳು ಪ್ರಪಂಚವನ್ನೇ ಆವರಿಸಿಕೊಳ್ಳಬೇಕೆಂಬ ವಿಶ್ವ ಪ್ರಜ್ಞೆಯೊಂದು ಹುಟ್ಟಿಕೊಂಡಿದೆ. ಹೀಗೆ ಬರೆಯುವಾಗಲೂ ನಮ್ಮ ನಂಬಿಕೆಗಳನ್ನು ಮತ್ತು ಸಮುದಾಯ ಹಿತವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಅದು ಸಾರ್ವತ್ರಿಕವಾದ ಹಾಗೂ ವಿಶ್ವಾತ್ಮಕ ಸೂಕ್ಷ್ಮಗಳನ್ನು ಒಳಗೊಂಡಿರಬೇಕು.

"ಒಂದಾನೊಂದು ಕಾಲದಲ್ಲಿ ಒಂದು ಊರು" ಎಂದು ಶುರು ಮಾಡಿದರೂ ಅದು ಒಂದೇ ಕಾಲ; ಒಂದೇ ಊರು ಅಂತ ಆಗುವುದಿಲ್ಲ. ಇಂತಹ ಕಾಲ್ಪನಿಕ ಮನಸ್ಥಿತಿ ಇಂದು ವಿಜುಯಲ್ ಆಗಿ ಉಳಿಯುವುದಿಲ್ಲ. ಅದು ಸಂದರ್ಭವನ್ನು ನಿಭಾಯಿಸುವ ನಮ್ಮ ಶಕ್ತಿ, ನೆನಪು ಹಾಗೂ ಕನಸುಗಳನ್ನು ಒಳಗೊಂಡ ವಿಸ್ತಾರತೆ ಪಡೆದುಕೊಳ್ಳುತ್ತದೆ.

**ನಮ್ಮ ಶೈಕ್ಷಣಿಕ ವ್ಯವಸ್ಥೆ ಮತ್ತು ಸ್ವರೂಪ**

ಕನ್ನಡ ವಿಶ್ವವಿದ್ಯಾಲಯದ ಪ್ರಾರಂಭದಲ್ಲಿ ಹಂಪಿಯಲ್ಲಿ ಜೋರು ಮಳೆ. ತುಂಗೆ ಉಕ್ಕಿ ಹರಿದು ವಿಶ್ವವಿದ್ಯಾಲಯದೊಳಗೆ ನೀರು ನುಗ್ಗಿತು. ನಾವೆಲ್ಲ ನಮ್ಮ ಕೈಗಳಿಂದ ಒದ್ದೆಯಾದ ಪುಸ್ತಕಗಳನ್ನು ಹೊರತಂದು ಒಣ ಹಾಕಿದೆವು. "ಕನ್ನಡ ವಿಶ್ವವಿದ್ಯಾಲಯ ಮುಳುಗಿ ಹೋಯಿತು" ಎಂದು ಅನೇಕ ಜನ ನನ್ನ ಮೇಲೆ ಮುಗಿಬಿದ್ದಾಗ ನನಗೆ ಒಂದು ಸತ್ಯ ಹೊಳೆಯಿತು" ಕನ್ನಡ ವಿವಿ ಅಂದರೆ ಕೇವಲ ಕಟ್ಟಡ ಅಲ್ಲ, ಇಲ್ಲಿರುವ ಪ್ರಾಧ್ಯಾಪಕ" ಎಂದು ಹೇಳಿದೆ. ನಮ್ಮ ಜನ ಒಪ್ಪಿಕೊಂಡರು. ಅಧ್ಯಾಪಕನನ್ನು ಕೇಂದ್ರವಾಗಿಟ್ಟುಕೊಂಡು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ನಾವು ರೂಪಿಸಬೇಕು. ಈ ದೇಶ ಗುರುಶಿಷ್ಯ ಪರಂಪರೆಯಲ್ಲಿ ಬಹುದೊಡ್ಡ ನಂಬಿಕೆ ಇಟ್ಟುಕೊಂಡಿದೆ. ಇವರಿಬ್ಬರೂ ಒಂದಾದರೆ ಅದ್ಭುತಗಳನ್ನು ಸೃಷ್ಟಿಸಬಹುದು. ಅಧ್ಯಾಪಕರಿಗೆ ಏನಾದರೂ ಮಾಡಬೇಕೆಂಬ ಸಂಕಲ್ಪ ಶಕ್ತಿ ಇರಬೇಕು.

**ಈ ಸಮ್ಮೇಳನ, ಈ ಜನಜಾತ್ರೆಯ ಅಗತ್ಯ**

ಇಂತಹ ನುಡಿಹಬ್ಬಗಳು ವರ್ಷಕ್ಕೊಮ್ಮೆ ಮಾತ್ರ ನಡೆಯುವುದು. ಹಬ್ಬದ ಜನಪದೀಯ ನಂಬಿಕೆ ನಮ್ಮ ಜನರಲ್ಲಿವೆ. ಅವರ ನಂಬಿಕೆಯನ್ನು ಗೌರವಿಸಲು ಇದಕ್ಕಿಂತ ಉತ್ತಮ ಸಂದರ್ಭವಿಲ್ಲ. ಇದನ್ನು ಹಮ್ಮಿಕೊಳ್ಳಲು ಕನ್ನಡ ಸಾಹಿತ್ಯ ಪರಿಷತ್ತಿಗೆ ಮಾತ್ರ ಸಾಧ್ಯ. ಪರಿಷತ್ತಿಗೆ ತನ್ನದೇ ಆದ ಪರಂಪರೆ ಮತ್ತು ಇತಿಹಾಸ ಇದೆ. ಇಲ್ಲಿ ಲಕ್ಷಾಂತರ ಜನ ಸೇರುತ್ತಾರೆ. ಹಾಗೆ ಜನ ಸೇರಲೇಬೇಕು. ಈ ಮೂಲಕ ಅವರಲ್ಲಿ ಕನ್ನಡದ ಬಗೆಗಿನ ಭಕ್ತಿ, ಪ್ರೀತಿ, ಅಭಿಮಾನದ ಆಳ ಅಗಲಗಳು ವ್ಯಕ್ತಗೊಳ್ಳುತ್ತವೆ. ಸರ್ಕಾರದ ಭಾಷಾ ನೀತಿಗೆ ಗಟ್ಟಿ ನೆಲೆಯಿಲ್ಲದ ಈ ಸಂದರ್ಭದಲ್ಲಿ ಈ ನುಡಿಹಬ್ಬ ಸಂಸ್ಕೃತಿಯ ಕೇಂದ್ರವಾಗುತ್ತದೆ. ಭಾಷೆ ಜನರ ಎದೆಯಾಳದಲ್ಲಿ ಗುಪ್ತವಾಗಿರುವ ಬಹು ಅಮೂಲ್ಯ ನಿಧಿ. ಕನ್ನಡ ನಂಬಿಕೆಯ ಭಾಷೆಯಾಗಿದೆ ಎಂದಾಗಲೇ ಮನುಷ್ಯ ಕನಸು ಕಾಣಲು ಸಾಧ್ಯವಾಗಿದೆ. ನಮ್ಮ ಸುದೀರ್ಘ ಕಾಲದ ನೆನಪುಗಳ ಕೋಶವೂ ಭಾಷೆಯಲ್ಲಿದೆ. ಇಂಗ್ಲೀಷಿನ ಕಾರಣದಿಂದಾಗಿ ನಮ್ಮ ಹುಡುಗರು ಪ್ರಪಂಚದ ಪ್ರಜೆಯಾಗುವ ಹಂಬಲ ಇಟ್ಟುಕೊಂಡಿದ್ದಾರೆ. ಭಾಷೆ ನಮ್ಮಂತಹ ಮುದುಕರ ಸಂಪತ್ತು ಎಂಬ ಹಮ್ಮು ಬಿಮ್ಮುಗಳನ್ನು ಹೊಸಕಾಲದ ಹುಡುಗರು ಇಟ್ಟುಕೊಂಡಿದ್ದಾರೆ. ಅಂಥವರಿಗೆ ಏನು ಸಾಧಿಸಲೂ ಸಾಧ್ಯವಾಗೋಲ್ಲ. ಭಾಷೆಯ ಸೂಕ್ಷ್ಮ ಜಗತ್ತು ಅವರ ಅನುಭವಕ್ಕೆ ಬರುವ ಕಾಲಕ್ಕೆ; ಅದೇ ಹುಡುಗರು ಶಕ್ತಿ ಕಳೆದುಕೊಂಡಿರುತ್ತಾರೆ. ಹಾಗಾಗಿ ಅವರ ಪ್ರಜ್ಞೆಯನ್ನು, ಭಾಷಾಭಿಮಾನವನ್ನು ಜೀವಂತವಾಗಿಡಲು ಸಾಹಿತ್ಯ ಸಮ್ಮೇಳನಗಳಂತಹ ನುಡಿ ಹಬ್ಬಗಳ ಅಗತ್ಯ ಇರುತ್ತದೆ. ■

# ಚಂದ್ರಶೇಖರ ಕಂಬಾರ ಹಲವು ಪ್ರತಿಭೆಗಳ ಆಗರ

>> ೩ನೇ ಪುಟದಿಂದ...

'ಸಿಂಗಾರವ್ವ ಮತ್ತು ಅರಮನೆ', 'ಶಿವರಾತ್ರಿ', 'ಮಹಾಮಾಯಿ', 'ಶಿಖರ ಸೂರ್ಯ' ಮುಂತಾದವು ಇವರ ಪ್ರಮುಖ ಕೃತಿಗಳು. ಉತ್ತರ ಕರ್ನಾಟಕದ ಜಾನಪದ ರಂಗಭೂಮಿ ಇವರ ಸಂಶೋಧನಾ ಕ್ಷೇತ್ರ. 'ಜಾನಪದ ವಿಶ್ವಕೋಶ' (೧೯೮೫) ದಂಥ ಬೃಹದ್ ಗ್ರಂಥ ಸಂಪುಟವನ್ನು ಕನ್ನಡದಲ್ಲಿ ಹೊರತಂದ ಕೀರ್ತಿ ಇವರದು. 'ಚಕೋರಿ' ಎಂಬ ಮಹಾಕಾವ್ಯ, ಜಾನಪದ, ರಂಗಭೂಮಿ, ಸಾಹಿತ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ೧೭ ಸಂಶೋಧನಾ ಕೃತಿಗಳನ್ನೂ ರಚಿಸಿದ್ದಾರೆ.

೯ ಕಾವ್ಯ, ೨೫ಕ್ಕೂ ಹೆಚ್ಚು ನಾಟಕ, ಒಂದು ಮಹಾಕಾವ್ಯ (ಚಕೋರಿ), ಒಂಬತ್ತಕ್ಕೂ ಹೆಚ್ಚು ಕಾದಂಬರಿ, ೧೭ ಸಂಶೋಧನಾ ಗ್ರಂಥ ಎಲ್ಲಾ ಸೇರಿ ಸುಮಾರು ಐವತ್ತಕ್ಕೂ ಮಿಕ್ಕಿ ಕೃತಿಗಳು ಹೊರಬಂದಿವೆ. ಇವರ ಅನೇಕ ಕೃತಿಗಳು ಹಿಂದಿ, ಇಂಗ್ಲೀಷ್ ಸಹಿತ ಹಲವು ಭಾಷೆಗಳಿಗೆ ಅನುವಾದಗೊಂಡಿವೆ. ಜೋಕುಮಾರಸ್ವಾಮಿ ನಾಟಕವು ಇಂಗ್ಲಿಷ್, ಮರಾಠಿ, ಹಿಂದಿ, ತೆಲುಗು, ತಮಿಳು, ಪಂಜಾಬಿ, ಕೊಂಕಣಿ, ಮೊದಲಾದ ಭಾಷೆಗಳಿಗೆ ಅನುವಾದವಾಗಿದೆ. 'ಚಾಲೇಶ' ನಾಟಕವು ಹಿಂದಿಗೆ ಭಾಷಾಂತರಗೊಂಡಿದೆ. 'ಜೈಸಿದ್ದ ನಾಯಕ' ನಾಟಕವು ಹಿಂದಿ, ಇಂಗ್ಲಿಷ್ ಭಾಷೆಗೆ ಭಾಷಾಂತರವಾಗಿದೆ. ಅಲಿಬಾಬಾ ಮಕ್ಕಳ ನಾಟಕವು ಇಂಗ್ಲಿಷ್, ಹಿಂದಿಯಲ್ಲಿ ಅನುವಾದವಾಗಿದೆ. 'ಸಾಂಬಶಿವ ಪ್ರಹಸನ' (ವಿಡಂಬನೆ) 'ಹರಕೆಯ ಕುರಿ' ನಾಟಕಗಳು ಹಿಂದಿ ಹಾಗೂ ಇಂಗ್ಲಿಷ್‌ಗೆ ಭಾಷಾಂತರವಾಗಿವೆ. 'ಸಿರಿಸಂಪಿಗೆ' ನಾಟಕವು ಕೇಂದ್ರ ಸಾಹಿತ್ಯ ಅಕಾಡೆಮಿ ವತಿಯಿಂದ ಬಹುತೇಕ ಎಲ್ಲ ಭಾರತೀಯ ಭಾಷೆಗಳಿಗೂ ಅನುವಾದವಾಗಿದೆ ಮತ್ತು ಈ ನಾಟಕದ ತಮಿಳು, ರಾಜಾಸ್ಥಾನಿ, ಹಿಂದಿ, ಮರಾಠಿ, ಅನುವಾದಿತ ಕೃತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಲಭಿಸಿದೆ. ಹುಲಿಯ ನೆರಳು ನಾಟಕವು ಇಂಗ್ಲಿಷ್, ಹಿಂದಿ, ತಮಿಳು ಭಾಷೆಗಳಿಗೆ ಅನುವಾದಗೊಂಡಿದೆ. ತುಕ್ರನ ಕನಸು ಇಂಗ್ಲಿಷ್, ಹಿಂದಿ ಭಾಷೆಗಳಿಗೆ ಅನುವಾದಗೊಂಡಿದೆ. 'ಮಹಾಮಾಯಿ' ನಾಟಕವು ಇಂಗ್ಲಿಷ್ ಹಾಗೂ ಹಿಂದಿಗೆ ಅನುವಾದವಾಗಿದೆ. 'ಬೆಂಬತ್ತಿದ ಕಣ್ಣು'(೧೯೬೧) ಮತ್ತು 'ನಾರ್ಸಿಸಸ್'(೧೯೬೯) ಹೆಸರು ಮಾಡಿದ ಇವರ ನಾಟಕಗಳು.

ಕಂಬಾರರ ಐದು ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಕಂಬಾರರ 'ಜೋಕುಮಾರಸ್ವಾಮಿ' ಭಾರತದ ಅತ್ಯುತ್ತಮ ನಾಟಕವೆಂದು 'ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ ಪಡೆದಿದೆ. 'ಜೈ ಸಿದ್ಧ ನಾಯಕ' ವರ್ಧಮಾನ್ ಪ್ರಶಸ್ತಿ ಪಡೆದಿದೆ. 'ಸಾವಿರ ನೆರಳು' ಕವನ ಸಂಕಲನ ಕೇರಳ ರಾಜ್ಯದ 'ಆಶಾನ್' ಪ್ರಶಸ್ತಿ ಪಡೆಯಿತು. ಕೆ.ವಿ. ಶಂಕರೇಗೌಡ ಪ್ರಶಸ್ತಿ, ಭಾರತ ನಾಟಕ ಅಕಾಡೆಮಿಯ 'ಶ್ರೇಷ್ಠ ನಾಟಕಕಾರ' ಪ್ರಶಸ್ತಿ, ಆಂಧ್ರ ಸರ್ಕಾರದ 'ಅತ್ಯುತ್ತಮ ಕವಿ' ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಜಾನಪದ ಕ್ಷೇತ್ರ ಸಾಧನೆಗೆ ಹಲವು ಪ್ರಶಸ್ತಿ, ದೇವರಾಜ ಅರಸ್ ಪ್ರಶಸ್ತಿ (೨೦೦೭), ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ(೨೦೦೪), ಪಂಪ ಪ್ರಶಸ್ತಿ (೨೦೦೪), ಸಂತ ಕಬೀರ್ ಪ್ರಶಸ್ತಿ(೨೦೦೨), ಆಳ್ವಾಸ್ ನುಡಿಸಿರಿ ಸಮ್ಮೇಳನದ ಅಧ್ಯಕ್ಷತೆ, ಪದ್ಮಶ್ರೀ ಪ್ರಶಸ್ತಿ (೨೦೦೧), ಮಾಸ್ತಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ (೧೯೮೮), ಕೋಲ್ಕತ್ತಾದ ನಂದಿಕರ್ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿ (೧೯೭೫), ಮಧ್ಯಪ್ರದೇಶ ಸರ್ಕಾರ ಕೊಡುವ ಕಾಳಿದಾಸ ಸಮ್ಮಾನ್ ಪ್ರಶಸ್ತಿ ಹೀಗೆ ಪ್ರಶಸ್ತಿಗಳ ಸುರಿಮಳೆ ಕಂಬಾರರಿಗೆ ದೊರೆತಿದೆ. ಇವೆಲ್ಲಕ್ಕೂ ಮಿಗಿಲಾಗಿ ಅವರಿಗೆ ಸಾಹಿತ್ಯದ ಮೇರುಪ್ರಶಸ್ತಿಯಾದ 'ಜ್ಞಾನಪೀಠ' ಪ್ರಶಸ್ತಿ ೨೦೧೦ರಲ್ಲಿ ಸಂದಿದೆ. ಅರ್ಪಿಸಿದ ಅಭಿನಂದನಾ ಗ್ರಂಥ 'ಸಿರಿಸಂಪಿಗೆ' ಮತ್ತು 'ಶಿವಪುರ ಕಂಬಾರ ನಮಸ್ಕಾರ'

ಚಂದ್ರಶೇಖರ ಕಂಬಾರರು ಈಗ ೮೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ. ಅವರಿಗೆ ಅಭಿನಂದನೆಗಳು.

**– ಸಂಪಾದಕ** ■

# ೮೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಧಾರವಾಡ

**೪, ೫ ಹಾಗೂ ೬ ಜನವರಿ, ೨೦೧೯ ಸ್ಥಳ : ಕೃಷಿ ವಿಶ್ವವಿದ್ಯಾಲಯ ಆವರಣ, ಧಾರವಾಡ**

**ಮಹಾಕವಿ ಪಂಪ ಮಹಾಮಂಟಪ, ಅಂಬಿಕಾತನಯದತ್ತ ಪ್ರಧಾನ ವೇದಿಕೆ**
**ಡೆಪ್ಯುಟಿ ಚನ್ನಬಸಪ್ಪ ಮಹಾದ್ವಾರ, ಆಲೂರು ವೆಂಕಟರಾವ್, ಡಾ. ವಿ.ಕೃ. ಗೋಕಾಕ್,**
**ಡಾ. ಎಂ.ಎಂ. ಕಲಬುರ್ಗಿ, ಡಾ. ಬೆಟಗೇರಿ ಕೃಷ್ಣಶರ್ಮ ದ್ವಾರಗಳು**

## ಧ್ವಜಾರೋಹಣ: ೪–೧–೨೦೧೯ ಶುಕ್ರವಾರ ಬೆಳಿಗ್ಗೆ ೮–೦೦

**ರಾಷ್ಟ್ರಧ್ವಜ**
**ಶ್ರೀ ಆರ್.ವಿ. ದೇಶಪಾಂಡೆ**
ಜಿಲ್ಲಾ ಉಸ್ತುವಾರಿ ಸಚಿವರು
ಮತ್ತು ಅಧ್ಯಕ್ಷರು, ಸ್ವಾಗತ ಸಮಿತಿ

**ಪರಿಷತ್ತಿನ ಧ್ವಜ**
**ಡಾ. ಮನು ಬಳಿಗಾರ್**
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

**ನಾಡಧ್ವಜ**
**ಡಾ. ಲಿಂಗರಾಜ ಅಂಗಡಿ**
ಅಧ್ಯಕ್ಷರು, ಜಿಲ್ಲಾ ಕ.ಸಾಪ., ಧಾರವಾಡ
ಹಾಗೂ ಪ್ರಧಾನ ಕಾರ್ಯದರ್ಶಿಗಳು, ಸ್ವಾಗತ ಸಮಿತಿ

ಸ್ವಾಗತ : ಶ್ರೀ ಎಸ್.ಸಿ. ಶ್ಯಾನವಾಡ, ನಿರೂಪಣೆ : ಶ್ರೀ ಎಫ್.ಬಿ. ಕಣವಿ, ವಂದನಾರ್ಪಣೆ : ಶ್ರೀ ಸಿಂ.ಲಿಂ. ನಾಗರಾಜ್, ನಿರ್ವಹಣೆ : ಶ್ರೀ ಸಿ.ಎಂ. ಕೆಂಗಾರ

---

## ಸಮ್ಮೇಳನಾಧ್ಯಕ್ಷರ ಮೆರವಣಿಗೆ

**೪–೧–೨೦೧೯ ಶುಕ್ರವಾರ ಬೆಳಿಗ್ಗೆ ೮–೩೦ ಗಂಟೆಗೆ**

**ಉದ್ಘಾಟನೆ**

**ಶ್ರೀಮತಿ ದೀಪಾ ಚೋಳನ್,** ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ

**ಮುಖ್ಯ ಅತಿಥಿಗಳು**

**ಶ್ರೀ ಎಂ.ಎನ್. ನಾಗರಾಜ್,** ಪೊಲೀಸ್ ಆಯುಕ್ತರು, ಹುಬ್ಬಳ್ಳಿ–ಧಾರವಾಡ ಮಹಾನಗರ
**ಶ್ರೀ ಬಿ. ಸತೀಶ್,** ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ
**ಶ್ರೀಮತಿ ಸಂಗೀತಾ ಜಿ.,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಧಾರವಾಡ ಜಿಲ್ಲೆ
**ಶ್ರೀ ಶಕೀಲ್ ಅಹ್ಮದ್,** ಆಯುಕ್ತರು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

**ಅತಿಥಿಗಳು**

**ಡಾ. ವೀರಣ್ಣ ಮತ್ತಿಕಟ್ಟಿ,** ಮಾಜಿ ಸಭಾಪತಿಗಳು, ವಿಧಾನ ಪರಿಷತ್ತು
**ಶ್ರೀ ಚಂದ್ರಕಾಂತ ಬೆಲ್ಲದ,** ಮಾಜಿ ಶಾಸಕರು
**ಶ್ರೀ ವಿನಯ ಕುಲಕರ್ಣಿ,** ಮಾಜಿ ಸಚಿವರು
**ಶ್ರೀ ಎ.ಎಂ. ಹಿಂಡಸಗೇರಿ,** ಮಾಜಿ ಸಚಿವರು
**ಶ್ರೀಮತಿ ಸೀಮಾ ಮಸೂತಿ,** ಮಾಜಿ ಶಾಸಕರು

**ಶ್ರೀ ಎನ್.ಎಚ್. ಕೋನರೆಡ್ಡಿ,** ಮಾಜಿ ಶಾಸಕರು
**ಶ್ರೀ ಮೋಹನ್ ಲಿಂಬಿಕಾಯಿ,** ಮಾಜಿ ಶಾಸಕರು, ವಿಧಾನ ಪರಿಷತ್ತು
**ಶ್ರೀ ವೀರಭದ್ರಪ್ಪ ಹಾಲಹರವಿ,** ಮಾಜಿ ಶಾಸಕರು
**ಶ್ರೀ ಅಶೋಕ್ ಕಾಟವೆ,** ಮಾಜಿ ಶಾಸಕರು
**ಶ್ರೀ ಪ್ರಕಾಶ್ ಉಡಿಕೇರಿ,** ಪ್ರಧಾನ ಕಾರ್ಯದರ್ಶಿ, ಕ.ವಿ.ವ., ಧಾರವಾಡ

**ಮೆರವಣಿಗೆ ಮಾರ್ಗ : ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ – ಜ್ಯುಬಿಲಿ ವೃತ್ತ – ವಿವೇಕಾನಂದ ವೃತ್ತ – ಅಂಜುಮನ್ ಮಹಾವಿದ್ಯಾಲಯ ರಾಣಿ ಚೆನ್ನಮ್ಮ ಉದ್ಯಾನ – ಹೊಸ ಬಸ್‌ನಿಲ್ದಾಣದ ರಸ್ತೆ ಮೂಲಕ – ಕೃಷಿ ವಿಶ್ವವಿದ್ಯಾಲಯ ಆವರಣದ ಪ್ರಧಾನ ವೇದಿಕೆಗೆ ತಲುಪುವುದು**

ನಿರೂಪಣೆ : ಪ್ರೊ. ಕೆ.ಎ. ದೊಡಮನಿ, ಡಾ. ರಾಮು ಮೂಲಗಿ ನಿರ್ವಹಣೆ : ಶ್ರೀ ಎಸ್.ಎನ್. ಅರಳೀಕಟ್ಟಿ

## ಉದ್ಘಾಟನಾ ಸಮಾರಂಭ ೦೪–೦೧–೨೦೧೯ ಶುಕ್ರವಾರ ಬೆಳಿಗ್ಗೆ ೧೧–೦೦ ಗಂಟೆಗೆ

| | | |
|---|---|---|
| ನಾಡಗೀತೆ | : | **ಮೂರುಸಾವಿರಮಠದ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಿಂದ** |
| ಸ್ವಾಗತ | : | **ಶ್ರೀ ಆರ್.ವಿ. ದೇಶಪಾಂಡೆ,** ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸ್ವಾಗತ ಸಮಿತಿ ಅಧ್ಯಕ್ಷರು |
| ಆಶಯ ನುಡಿ | : | **ಡಾ. ಮನು ಬಳಿಗಾರ್,** ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು |
| ಉದ್ಘಾಟನೆ | : | **ಶ್ರೀ ಎಚ್. ಡಿ. ಕುಮಾರಸ್ವಾಮಿ,** ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ |
| ನಿಕಟಪೂರ್ವ ಸಮ್ಮೇಳನಾಧ್ಯಕ್ಷರ ನುಡಿ | : | **ಪ್ರೊ. ಚಂದ್ರಶೇಖರ ಪಾಟೀಲ,** ಹಿರಿಯ ಸಾಹಿತಿಗಳು, ೮೩ನೇ ಅ.ಭಾ.ಕ.ಸಾ.ಸಮ್ಮೇಳನ, ಮೈಸೂರು |
| ಸಮ್ಮೇಳನಾಧ್ಯಕ್ಷರ ಭಾಷಣ | : | **ಡಾ. ಚಂದ್ರಶೇಖರ ಕಂಬಾರ,** ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು |
| ಮಹಾಮಂಟಪ ಉದ್ಘಾಟನೆ | : | **ಡಾ. ಜಿ. ಪರಮೇಶ್ವರ,** ಮಾನ್ಯ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ |
| ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ | : | **ಡಾ. ಜಯಮಾಲ,** ಮಾನ್ಯ ಸಚಿವರು, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ, ಮಕ್ಕಳ ಅಭಿವೃದ್ಧಿ |
| ಸ್ಮರಣ ಸಂಚಿಕೆ ಬಿಡುಗಡೆ | : | **ಶ್ರೀ ಬಸವರಾಜ ಹೊರಟ್ಟಿ,** ಮಾನ್ಯ ಮಾಜಿ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು, ಶಾಸಕರು |
| ಪುಸ್ತಕ ಮಳಿಗೆಗಳ ಉದ್ಘಾಟನೆ | : | **ಶ್ರೀ ಜಗದೀಶ್ ಶೆಟ್ಟರ್,** ಮಾನ್ಯ ಶಾಸಕರು, ಮಾಜಿ ಮುಖ್ಯಮಂತ್ರಿಗಳು |
| ವಿವಿಧ ಲೇಖಕರ ಪುಸ್ತಕಗಳ ಬಿಡುಗಡೆ | : | **ಡಾ. ಪಾಟೀಲ ಪುಟ್ಟಪ್ಪ,** ಹಿರಿಯ ಲೇಖಕರು, ಪತ್ರಕರ್ತರು |
| ಪರಿಷತ್ತಿನ ಪುಸ್ತಕಗಳ ಬಿಡುಗಡೆ | : | **ಶ್ರೀ ಪ್ರಲ್ಹಾದ ಜೋಶಿ,** ಮಾನ್ಯ ಸಂಸದರು, ಧಾರವಾಡ |
| ಚಿತ್ರಕಲಾ ಪ್ರದರ್ಶನ ಉದ್ಘಾಟನೆ | : | **ಶ್ರೀ ಚನ್ನಬಸಪ್ಪ ಶಿವಳ್ಳಿ,** ಮಾನ್ಯ ಶಾಸಕರು |
| ವಾಣಿಜ್ಯ ಮಳಿಗೆಗಳ ಉದ್ಘಾಟನೆ | : | **ಶ್ರೀ ಸುಧೀರ ಸರಾಫ್,** ಮಾನ್ಯ ಮಹಾಪೌರರು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ |
| ವೇದಿಕೆ ಉದ್ಘಾಟನೆ | : | **ಶ್ರೀಮತಿ ಚೈತ್ರಾ ಶಿರೂರ,** ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಧಾರವಾಡ |
| ಮುಖ್ಯದ್ವಾರ ಉದ್ಘಾಟನೆ | : | **ಶ್ರೀ ಅರವಿಂದ ಬೆಲ್ಲದ,** ಮಾನ್ಯ ಶಾಸಕರು |
| ಮುಖ್ಯ ಅತಿಥಿಗಳು | : | **ಶ್ರೀ ಅಬ್ಬಯ್ಯ ಪ್ರಸಾದ,** ಮಾನ್ಯ ಶಾಸಕರು |
| | | **ಶ್ರೀ ಅಮೃತ ದೇಸಾಯಿ,** ಮಾನ್ಯ ಶಾಸಕರು |
| | | **ಶ್ರೀ ಶ್ರೀನಿವಾಸ ಮಾನೆ,** ಮಾನ್ಯ ಶಾಸಕರು, ವಿಧಾನ ಪರಿಷತ್ತು |
| | | **ಶ್ರೀ ಶಂಕರ ಪಾಟೀಲ ಮುನೇನಕೊಪ್ಪ,** ಮಾನ್ಯ ಶಾಸಕರು |
| | | **ಶ್ರೀ ಸಿ.ಎಂ. ನಿಂಬಣ್ಣವರ್,** ಮಾನ್ಯ ಶಾಸಕರು |
| | | **ಶ್ರೀ ಪ್ರದೀಪ್ ಶೆಟ್ಟರ್,** ಮಾನ್ಯ ಶಾಸಕರು, ವಿಧಾನ ಪರಿಷತ್ತು |
| | | **ಶ್ರೀ ಎಸ್.ವ್ಹಿ. ಸಂಕನೂರ,** ಮಾನ್ಯ ಶಾಸಕರು, ವಿಧಾನ ಪರಿಷತ್ತು |
| | | **ಡಾ. ಬಿ. ಬಸವರಾಜು,** ಪ್ರಧಾನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| | | **ಡಾ. ಎಂ.ಬಿ. ಚೆಟ್ಟಿ,** ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ |
| | | **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ |

ನಿರ್ವಹಣೆ : **ಡಾ. ರಾಜಶೇಖರ ಹತಗುಂದಿ** * **ಶ್ರೀ ವ.ಚ. ಚನ್ನೇಗೌಡ,** ಗೌರವ ಕಾರ್ಯದರ್ಶಿಗಳು, ಕ.ಸಾ.ಪ., **ಶ್ರೀ ಪಿ. ಮಲ್ಲಿಕಾರ್ಜುನಪ್ಪ,** ಗೌರವ ಕೋಶಾಧ್ಯಕ್ಷರು, ಕ.ಸಾ.ಪ., **ಡಾ. ಪದ್ಮರಾಜ ದಂಡಾವತಿ,** ರಾಜ್ಯ ಸಂಚಾಲಕರು, ಕ.ಸಾ.ಪ. ವಂದನಾರ್ಪಣೆ : **ಡಾ. ಲಿಂಗರಾಜ ರು. ಅಂಗಡಿ,** ಅಧ್ಯಕ್ಷರು, ಜಿಲ್ಲಾ ಕ.ಸಾ.ಪ. ಧಾರವಾಡ,
ನಿರೂಪಣೆ : **ಶ್ರೀಮತಿ ಅಪರ್ಣ ವಸ್ತಾರೆ** * **ಡಾ. ವತ್ಸಲಾ ಮೋಹನ್**

## ಪ್ರಧಾನ ವೇದಿಕೆ

**ಗೋಷ್ಠಿ – ೧ : ೪–೧–೨೦೧೯ ಶುಕ್ರವಾರ ಮಧ್ಯಾಹ್ನ ೩–೦೦ ರಿಂದ ೪–೪೫**

### ಉತ್ತರ ಕರ್ನಾಟಕ : ಅಭಿವೃದ್ಧಿಯ ಸವಾಲುಗಳು

ಅಧ್ಯಕ್ಷತೆ : ಶ್ರೀ ಎಚ್.ಕೆ. ಪಾಟೀಲ

ಉಪನ್ಯಾಸಕರು

| | |
|---|---|
| ಶ್ರೀ ಎಸ್.ಆರ್. ಹಿರೇಮಠ | **ವಿಷಯ :** ನಂಜುಂಡಪ್ಪ ವರದಿ ಅನುಷ್ಠಾನ : ಸವಾಲುಗಳು |
| ಡಾ. ಎಸ್.ಎಂ. ಜಾಮದಾರ್ | **ವಿಷಯ :** ಬರಗಾಲ ಮತ್ತು ವಲಸೆ |
| ಡಾ. ಗುರುಪಾದ ಮರಿಗುದ್ದಿ | **ವಿಷಯ :** ಸಾಂಸ್ಕೃತಿಕ ಪ್ರಾತಿನಿಧ್ಯ |

ಸ್ವಾಗತ : ಶ್ರೀ ಪ್ರದೀಪಕುಮಾರ ಕಲ್ಕೂರ, ನಿರೂಪಣೆ : ಡಾ. ದೊಡ್ಡಮಲ್ಲಯ್ಯ, ವಂದನಾರ್ಪಣೆ : ಡಾ. ವೈ.ಡಿ. ರಾಜಣ್ಣ, ನಿರ್ವಹಣೆ : ಶ್ರೀ ರಾಜಶೇಖರ ಗು. ಅಂಗಡಿ

ಗೋಷ್ಠಿ – ೨ : ೪–೧–೨೦೧೯ ಶುಕ್ರವಾರ ಸಂಜೆ ೪–೪೫ ರಿಂದ ೬–೩೦

## ದಲಿತ ಅಸ್ಮಿತೆ

ಅಧ್ಯಕ್ಷತೆ : ಶ್ರೀ ಕೆ.ಬಿ. ಶಾಣಪ್ಪ

ಉಪನ್ಯಾಸಕರು

ಶ್ರೀ ಗುರುಪ್ರಸಾದ್ ಕೆರೆಗೋಡು — ವಿಷಯ : ದಲಿತ ಚಳವಳಿಯ ಬಿಕ್ಕಟ್ಟುಗಳು
ಶ್ರೀ ಕೆ.ಬಿ. ಸಿದ್ದಯ್ಯ — ವಿಷಯ : ದಲಿತತ್ವ : ಸ್ಥಿತ್ಯಂತರಗಳು
ಡಾ. ಬಿ.ಎಂ. ಪುಟ್ಟಯ್ಯ — ವಿಷಯ : ದಲಿತ ವಾಙ್ಮಯ : ಹೊಸ ನೆಲೆಗಳ ಶೋಧ

ಸ್ವಾಗತ : ಡಾ. ರಮೇಶ ಲಂಡನಕರ, ನಿರೂಪಣೆ : ಶ್ರೀ ಕುಂದೂರು ಅಶೋಕ, ವಂದನಾರ್ಪಣೆ : ಶ್ರೀ ಅರವಿಂದ ಕರ್ಕಿಕೋಡಿ, ನಿರ್ವಹಣೆ : ಶ್ರೀ ಚಿ.ಮಾ. ಸುಧಾಕರ

ಗೋಷ್ಠಿ – ೩ : ೫–೧–೨೦೧೯ ಶನಿವಾರ ಬೆಳಿಗ್ಗೆ ೯–೪೫ ರಿಂದ ೧೧–೩೦

## ಕನ್ನಡ ಶಾಲೆಗಳ ಅಳಿವು-ಉಳಿವು

ಅಧ್ಯಕ್ಷತೆ : ಪ್ರೊ. ಜಿ.ಎಸ್. ಜಯದೇವ್

ಉಪನ್ಯಾಸಕರು

ಶ್ರೀಮತಿ ನಾಗರತ್ನ ಬಂಜಗೆರೆ — ವಿಷಯ : ಸರ್ಕಾರಿ ಶಾಲೆಗಳು ಮತ್ತು ಆರ್‌ಟಿಇ ಪ್ರಲೋಭನೆ
ಶ್ರೀ ಅಬ್ದುಲ್ ರೆಹಮಾನ್ ಪಾಷ — ವಿಷಯ : ಕನ್ನಡ ಮಾಧ್ಯಮ ಎದುರಿಸುತ್ತಿರುವ ಬಿಕ್ಕಟ್ಟುಗಳು
ಶ್ರೀ ಸಿದ್ಧರಾಮ ಮನಹಳ್ಳಿ — ವಿಷಯ : ಗುಣಮಟ್ಟದ ಶಿಕ್ಷಣ ಮತ್ತು ಮೂಲಭೂತ ಸೌಕರ್ಯಗಳು

ಸ್ವಾಗತ : ಶ್ರೀ ಸಿದ್ಧರಾಮ ಕಲ್ಮಠ, ನಿರೂಪಣೆ : ಶ್ರೀ ನೀಲಾವರ ಸುರೇಂದ್ರ ಅಡಿಗ, ವಂದನಾರ್ಪಣೆ : ಶ್ರೀ ನಾಯಕರಹಳ್ಳಿ ಮಂಜೇಗೌಡ, ನಿರ್ವಹಣೆ : ಶ್ರೀ ಬಸವರಾಜ ಮಸೂತಿ

ಬೆಳಿಗ್ಗೆ ೧೧–೩೦ ರಿಂದ ೧೨–೧೫

## ವಿಶೇಷ ಉಪನ್ಯಾಸ

ವಿಶೇಷ ಉಪನ್ಯಾಸಕರು

ಡಾ. ಸಿ.ಎನ್. ರಾಮಚಂದ್ರನ್, ಹಿರಿಯ ವಿಮರ್ಶಕರು — ವಿಷಯ : ಡಾ. ಚಂದ್ರಶೇಖರ ಕಂಬಾರರ ಸಾಹಿತ್ಯ

ನಿರೂಪಣೆ : ಶ್ರೀ ನಾಗಾನಂದ ಕೆಂಪರಾಜ್, ಸ್ವಾಗತ : ಡಾ. ಎಸ್.ಪಿ. ಗೌಡರ, ವಂದನಾರ್ಪಣೆ ಮತ್ತು ನಿರ್ವಹಣೆ : ಶ್ರೀ ಸಿದ್ದಪ್ಪ ಎಸ್. ಹೊಟ್ಟಿ

ಗೋಷ್ಠಿ – ೪ : ೫–೧–೨೦೧೯ ಮಧ್ಯಾಹ್ನ ೧೨–೧೫ ರಿಂದ ೨–೦೦

## ಮಹಿಳಾ ಸಂವೇದನೆ

ಅಧ್ಯಕ್ಷತೆ : ಡಾ. ವೀಣಾ ಶಾಂತೇಶ್ವರ

ಉಪನ್ಯಾಸಕರು

ಡಾ. ಕವಿತಾ ರೈ — ವಿಷಯ : ರಾಜಕಾರಣ ಮತ್ತು ಮಹಿಳಾ ಪ್ರಾತಿನಿಧ್ಯ
ಶ್ರೀಮತಿ ರೂಪಾ ಡಿ. — ವಿಷಯ : ಮಹಿಳೆ ಮತ್ತು ಕಾನೂನು
ಶ್ರೀಮತಿ ಶಶಿಕಲಾ ವಸ್ತ್ರದ — ವಿಷಯ : ಮಹಿಳಾ ಆತ್ಮಕಥನಗಳು

ಸ್ವಾಗತ : ಡಾ. ತಮಿಳ್ ಸೆಲ್ವಿ , ನಿರೂಪಣೆ : ಡಾ. ಗೀತಾ ವಸಂತ, ವಂದನಾರ್ಪಣೆ : ಶ್ರೀಮತಿ ಮಾಯಾ ರಾಮನ್, ನಿರ್ವಹಣೆ : ಡಾ. ವೀಣಾ ಸಂಕನಗೌಡರ

ಗೋಷ್ಠಿ – ೫ : ೫–೧–೨೦೧೯ ಮಧ್ಯಾಹ್ನ ೨–೩೦ ರಿಂದ ೪–೦೦

## ಗಡಿನಾಡ ತಲ್ಲಣಗಳು

ಅಧ್ಯಕ್ಷತೆ : ಶ್ರೀ ರಾಘವೇಂದ್ರ ಜೋಶಿ

ಉಪನ್ಯಾಸಕರು

ಶ್ರೀ ಅಶೋಕ ಚಂದರಗಿ — ವಿಷಯ : ಗಡಿ ಸಮಸ್ಯೆ : ಎದುರಿಸಬೇಕಾದ ಪ್ರಶ್ನೆಗಳು (ಜಾರಿಯಾಗಬೇಕಾದ ಮಹಾಜನ ವರದಿ)
ಶ್ರೀ ಶ್ರೀನಿವಾಸ ಜೋಕಟ್ಟೆ, ಮುಂಬೈ — ವಿಷಯ : ಹೊರನಾಡ ಕನ್ನಡಿಗರ ಸಮಸ್ಯೆಗಳು
ಪ್ರೊ. ಚಂದ್ರಕಾಂತ ಪೋಕಳೆ — ವಿಷಯ : ಗಡಿನಾಡಿನ ಕೊಡು–ಕೊಳ್ಳುವಿಕೆ

ಸ್ವಾಗತ : ಶ್ರೀ ಸುರೇಶ ಚನಶೆಟ್ಟಿ, ನಿರೂಪಣೆ : ಶ್ರೀ ಲಿಂಗಯ್ಯ ಬಿ. ಹಿರೇಮಠ, ವಂದನಾರ್ಪಣೆ : ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ, ನಿರ್ವಹಣೆ : ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ

ಗೋಷ್ಠಿ – ೬ : ೫-೧-೨೦೧೯ ಸಂಜೆ ೪-೦೦ ರಿಂದ ೫-೧೫

## ನೀರಾವರಿ : ಜ್ವಲಂತ ಸಮಸ್ಯೆಗಳು

ಅಧ್ಯಕ್ಷತೆ : ಶ್ರೀ ಮೋಹನ್ ಕಾತರಕಿ — ವಿಷಯ : ಕೃಷ್ಣಾ ಮತ್ತು ಕಾವೇರಿ ಕೊಳ್ಳದ ಅಪೂರ್ಣ ಯೋಜನೆಗಳು

ಉಪನ್ಯಾಸಕರು

ಶ್ರೀ ವಿಜಯ ಕುಲಕರ್ಣಿ — ವಿಷಯ : ಮಹದಾಯಿ ಯೋಜನೆ

ಶ್ರೀ ಎಸ್.ಎಫ್. ಪಾಟೀಲ — ವಿಷಯ : ಜಲಮೂಲಗಳು ಮತ್ತು ಜಲಾಶಯಗಳ ಸದ್ಬಳಕೆ

ಸ್ವಾಗತ : ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ, ನಿರೂಪಣೆ : ಡಾ. ಎಚ್.ಎಸ್. ಮಂಜುನಾಥ ಕುರ್ಕಿ, ವಂದನಾರ್ಪಣೆ : ಶ್ರೀ ಬಿ.ಎಸ್. ವಿನಯ್, ನಿರ್ವಹಣೆ : ಶ್ರೀ ರಂಗನಾಥ ವಾಲ್ಮೀಕಿ

ಗೋಷ್ಠಿ – ೭ : ೫-೧-೨೦೧೯ ಸಂಜೆ ೫-೧೫ ರಿಂದ ೬-೪೫

## ಕನ್ನಡ ಚಲನಚಿತ್ರ ಮತ್ತು ಕಿರುತೆರೆ

ಅಧ್ಯಕ್ಷತೆ : ಡಾ. ಮುಖ್ಯಮಂತ್ರಿ ಚಂದ್ರು

ಉಪನ್ಯಾಸಕರು

ಶ್ರೀ ಬಿ.ಎಸ್. ಲಿಂಗದೇವರು — ವಿಷಯ : ಚಲನಚಿತ್ರ : ಹೊಸಬರು ತೋರಿದ ದಾರಿ

ಶ್ರೀ ಪಿ. ಶೇಷಾದ್ರಿ — ವಿಷಯ : ಕಿರುತೆರೆ ಮತ್ತು ಸಾಮಾಜಿಕ ಸ್ವಾಸ್ಥ್ಯ

ಶ್ರೀ ಎನ್.ಆರ್. ನಂಜುಂಡೇಗೌಡ — ವಿಷಯ : ಡಬ್ಬಿಂಗ್, ರಿಮೇಕ್, ಪ್ರದರ್ಶನ ಮಂದಿರಗಳು ಇತ್ಯಾದಿ : ಸವಾಲುಗಳು

ಸ್ವಾಗತ : ಶ್ರೀ ಮಾಯಣ್ಣ, ನಿರೂಪಣೆ : ಶ್ರೀ ಯದೀಶ್ ಶೆಟ್ಟಿ, ವಂದನಾರ್ಪಣೆ : ಶ್ರೀ ಬಿ.ಎಸ್. ಲೋಕೇಶ್ ಸಾಗರ, ನಿರ್ವಹಣೆ : ಶ್ರೀ ಕೆ.ಎಸ್.ಎಂ. ಹುಸೇನ್

## ಸನ್ಮಾನ ಸಮಾರಂಭ

೬-೧-೨೦೧೯ ಭಾನುವಾರ ಬೆಳಿಗ್ಗೆ ೯-೩೦ ರಿಂದ ೧೧-೦೦

ಸನ್ಮಾನಿಸುವವರು : **ಶ್ರೀ ಬಿ.ಎಸ್. ಯಡಿಯೂರಪ್ಪ**, ಕರ್ನಾಟಕ ವಿಧಾನಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರು, ಮಾಜಿ ಮುಖ್ಯಮಂತ್ರಿಗಳು

ಆಶಯ ನುಡಿ : **ಡಾ. ಷ. ಶೆಟ್ಟರ್**, ಹೆಸರಾಂತ ಸಂಶೋಧಕರು, ಇತಿಹಾಸಕಾರರು

ಅಧ್ಯಕ್ಷತೆ : **ಡಾ. ಮನು ಬಳಿಗಾರ್**, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

**ಸನ್ಮಾನಿತರು :** ಶ್ರೀ ಐ.ಎಂ. ವಿಠಲಮೂರ್ತಿ, ಡಾ. ಹೆಚ್. ಸಿ. ಮಹದೇವಪ್ಪ , ಪ್ರೊ. ಮಲ್ಲಿಕಾರ್ಜುನ ಹಿರೇಮಠ, ಡಾ. ಸತೀಶ್‌ಕುಮಾರ್ ಹೊಸಮನಿ, ಪ್ರೊ. ಐ.ಜಿ. ಸನದಿ, ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ, ಶ್ರೀಮತಿ ತಾರಾ ಅನೂರಾಧ, ಶ್ರೀ ನಿತಿನ್ ಷಾ, ಪ್ರೊ. ರಂಗರಾಜ ವನದುರ್ಗ, ಡಾ. ಎನ್.ಪಿ. ಭಟ್, ಶ್ರೀ ಎಂ.ಕೆ. ಭಾಸ್ಕರರಾವ್, ಶ್ರೀ ಬಸಂತಕುಮಾರ ಪಾಟೀಲ, ಶ್ರೀ ಕಿರಣ್ ಉಪಾಧ್ಯಾಯ ಬಹರೇನ್, ಪ್ರೊ. ಪಿ.ಎಸ್. ಕನಮಡಿ, ಪ್ರೊ. ಹಸನಬಿ ಬೀಳಗಿ, ಡಾ. ನಂದಾ ಎಂ. ಪಾಟೀಲ, ಶ್ರೀ ಎಂ. ರಾಮಯ್ಯ, ಶ್ರೀ ಯು.ಪಿ. ಪುರಾಣಿಕ್, ಶ್ರೀ ವಿ.ಎನ್. ತಿಪ್ಪನಗೌಡರ, ಶ್ರೀ ಶಶಿ ಸಾಲಿ, ಶ್ರೀ ಅಶೋಕ ಪೂಜಾರ, ಶ್ರೀ ಸುರೇಶ್ ಹಾಲಬಾವಿ, ಶ್ರೀ ಜಿ. ಮಹಿಮಯ್ಯ, ಶ್ರೀ ಎಚ್.ಎಸ್. ಮಹದೇವ್, ಶ್ರೀ ಡಿ.ಎನ್. ಲೋಕಪ್ಪ, ಶ್ರೀ ಎಂ.ಎ. ಪೊನ್ನಪ್ಪ, ಶ್ರೀ ಭೀಮಾಶಂಕರ ಪಾಟೀಲ, ಡಾ. ಮೈಲಹಳ್ಳಿ ರೇವಣ್ಣ, ಡಾ. ಬಿ.ಡಿ. ಭೂಕಾಂತ, ಶ್ರೀ ಮೋಹನ್ ವೆರ್ಣೆಕರ್, ಶ್ರೀ ಎ.ಆರ್. ಉಜ್ಜನಪ್ಪ, ಡಾ. ಶಿವಾನಂದ ಕಡಪಟ್ಟಿ, ಶ್ರೀ ಟಿ. ತಿಮ್ಮೇಶ್, ಶ್ರೀ ಅನೂಪ್ ಕುವಾರ್, ಶ್ರೀ ಬಿ.ಎಲ್. ಪಾಟೀಲ, ಶ್ರೀ ಶ್ರೀಧರಗಡ್ಡೆ ಸಿದ್ದಬಸಪ್ಪ, ಶ್ರೀ ಎಚ್.ಕೆ. ಕೆಂಪೇಗೌಡ, ಶ್ರೀ ಪಿ. ವಿಲಾಸ್ ಕುಮಾರ್, ಡಾ. ಜೆ.ಎನ್. ರಾಮಕೃಷ್ಣೇಗೌಡ, ಡಾ. ವಿ.ಆರ್. ಪದ್ಮನಾಭರಾವ್, ಡಾ. ಮೃತ್ಯುಂಜಯ ರುಮಾಲೆ, ಶ್ರೀ ಬೆಳವಾಡಿ ಮಂಜುನಾಥ್, ಡಾ. ಜಿ. ಸವಿತ, ಶ್ರೀ ಯಾಕೂಬ್ ಖಾದರ್ ಗುಲ್ವಾಡಿ, ಶ್ರೀ ಮಾದಂಡ ಎಸ್. ಪೂವಯ್ಯ, ಶ್ರೀ ಕುಪೇಂದ್ರ ಪಾಟೀಲ, ಶ್ರೀಮತಿ ಶೈಲಜಾ ಭಿಂಗೆ, ಡಾ. ಎಚ್.ಎಲ್. ನಾಗರಾಜ, ಶ್ರೀ ಶಿವಶಂಕರ ಟೋಕರೆ, ಶ್ರೀ ಬಸವರಾಜ ತಿರಕಪ್ಪ ಶಿಗ್ಗಾವಿ.

ಸ್ವಾಗತ : ಶ್ರೀ ಮಲ್ಲಿಕಾರ್ಜುನ ಯಂಡಿಗೇರಿ, ನಿರೂಪಣೆ : ಶ್ರೀ ಶರಣು ಗೋಗೇರಿ, ವಂದನಾರ್ಪಣೆ : ಡಾ. ಬಸವಪ್ರಭು ಪಾಟೀಲ ಬೆಟ್ಟದೂರು, ನಿರ್ವಹಣೆ : ಪ್ರೊ. ಕೆ.ಎಸ್. ಕೌಜಲಗಿ

ಗೋಷ್ಠಿ – ೮ : ೬-೧-೨೦೧೯ ಬೆಳಿಗ್ಗೆ ೧೧-೦೦ ರಿಂದ ೧-೦೦

**ಕವಿಗೋಷ್ಠಿ :** ಅಧ್ಯಕ್ಷತೆ : ಡಾ. ಎಚ್.ಎಸ್. ಶಿವಪ್ರಕಾಶ್, ನವದೆಹಲಿ ಆಶಯ ಭಾಷಣ: ಶ್ರೀಮತಿ ಪ್ರತಿಭಾ ನಂದಕುಮಾರ್

**ಭಾಗವಹಿಸುವ ಕವಿ, ಕವಯತ್ರಿಯರು :** ಶ್ರೀ ಬಿ.ಎಂ. ಹನೀಫ್, ಶ್ರೀ ಚಿದಾನಂದ ಸಾಲಿ, ಡಾ. ಕೆ.ಆರ್. ಸಂಧ್ಯಾರೆಡ್ಡಿ, ಡಾ. ಪ್ರಜ್ಞಾ ಮತ್ತಿಹಳ್ಳಿ, ಡಾ. ಎಚ್.ಎಸ್. ಅನುಪಮಾ, ಡಾ. ಜಿ.ಎಚ್. ಹನ್ನೆರಡುಮಠ, ಶ್ರೀ ಪ್ರಭು ಚನ್ನಬಸವ ಸ್ವಾಮೀಜಿ, ಶ್ರೀಮತಿ ನಂದಿನಿ ವಿಶ್ವನಾಥ ಹೆದ್ದುರ್ಗ, ಡಾ. ಶಾಂತನಾಯ್ಕ ಶಿರಗಾನಹಳ್ಳಿ, ಶ್ರೀ ಶರಣು ಹುಲ್ಲೂರು, ಡಾ. ಲಿಂಗಣ್ಣ ಗೋನಾಲ ಹೈದರಾಬಾದ್, ಡಾ. ಕಾ.ವೆಂ. ಶ್ರೀನಿವಾಸಮೂರ್ತಿ, ಶ್ರೀಮತಿ ನಿರ್ಮಲಾ ಯಲಿಗಾರ, ಶ್ರೀ ಪ್ರಕಾಶ್ ಕಡಮೆ, ಶ್ರೀ ವಿ.ಎಸ್. ಶಾನಭಾಗ ಮುಂಬಯಿ, ಶ್ರೀಮತಿ ಅಕ್ಷತಾ ಕೃಷ್ಣಮೂರ್ತಿ, ಶ್ರೀಮತಿ ಬಾ.ಹ. ರಮಾಕುಮಾರಿ, ಶ್ರೀ ಪಿ.ಬಿ. ಯಲಿಗಾರ, ಶ್ರೀಮತಿ ಕವಿತಾ ಕುಸುಗಲ್, ಶ್ರೀ ಈರಯ್ಯ ನಿಂಗಯ್ಯ ಕಿಲ್ಲೇದಾರ, ಶ್ರೀಮತಿ ಸಬಿತಾ ಬನ್ನಾಡಿ, ಡಾ. ಆರ್. ಓಬಳೇಶ ಘಟ್ಟಿ, ಶ್ರೀ ಆಲೂರು ದೊಡ್ಡನಿಂಗಪ್ಪ, ಶ್ರೀ ಬಸವರಾಜ ಸೂಳಿಭಾವಿ, ಡಾ. ಮಲ್ಲಿಕಾರ್ಜುನ ಗುಮ್ಮಗೋಳ, ಡಾ. ನಿಂಗಪ್ಪ ಮುದೇನೂರು, ಶ್ರೀ ಟಿ. ಸತೀಶ್ ಜವರೇಗೌಡ,

ಸ್ವಾಗತ : ಡಾ. ಸಂತೋಷ್ ಹಾನಗಲ್, ನಿರೂಪಣೆ : ಶ್ರೀ ಡಿ.ಬಿ. ಶಂಕರಪ್ಪ, ವಂದನಾರ್ಪಣೆ : ಶ್ರೀ ಕೈವಾರ ಎನ್. ಶ್ರೀನಿವಾಸ್, ನಿರ್ವಹಣೆ : ಶ್ರೀ ಅಮೃತೇಶ್ ಹೊಸಳ್ಳಿ

ಗೋಷ್ಠಿ – ೯ : ೬–೧–೨೦೧೯ ಮಧ್ಯಾಹ್ನ ೧–೩೦ ರಿಂದ ೩–೦೦

## ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ

ಪ್ರಧಾನ ನಿರ್ವಹಣೆ : ಡಾ. ವಿಕ್ರಮ ವಿಸಾಜಿ

**ಸಂವಾದದಲ್ಲಿ :** ಡಾ. ಎಂ.ಜಿ. ಈಶ್ವರಪ್ಪ, ಪ್ರೊ. ಕೆ.ಆರ್. ಇಕ್ಬಾಲ್ ಅಹ್ಮದ್, ಡಾ. ಚಂದ್ರಶೇಖರ ಉಷಾಲ, ಶ್ರೀ ರವಿ ಡಿ. ಚನ್ನಣ್ಣವರ್, ಡಾ. ಕೆ.ಪಿ. ರಮೇಶ, ಶ್ರೀಮತಿ ಭಾರತಿ ಹೆಗಡೆ, ಡಾ. ಲೋಹಿತ್ ನಾಯ್ಕರ್, ಶ್ರೀಮತಿ ವನಮಾಲಾ ಸಂಪನ್ನಕುಮಾರ, ಶ್ರೀ ಮನೋಜ ಪಾಟೀಲ್, ಡಾ. ಸಂಗಮೇಶ್ ಹಂಡಿಗಿ, ಡಾ. ಪದ್ಮಿನಿ ನಾಗರಾಜು, ಶ್ರೀ ಅಮಿತ್ ಬಿರಾದಾರ, ಶ್ರೀ ಸದಾಶಿವ ಮರ್ಜಿ, ಶ್ರೀ ಎಚ್.ಬಿ. ಮದನ್‌ಗೌಡ, ಡಾ. ಎಸ್.ಎಸ್. ಅಂಗಡಿ, ಡಾ. ಆನಂದಪ್ಪ ಜೋಗಿ, ಶ್ರೀ ಮಲ್ಲಿಕಾರ್ಜುನ ಕಡಕೋಳ.

ಸ್ವಾಗತ : ಶ್ರೀ ಶೇಖರಗೌಡ ಮಾಲಿಪಾಟೀಲ, ನಿರೂಪಣೆ : ಡಾ. ಡಿ.ಕೆ. ಚಿತ್ತಯ್ಯ ಪೂಜಾರ್, ವಂದನಾರ್ಪಣೆ : ಶ್ರೀ ವೀರಭದ್ರ ಸಿಂಪಿ ನಿರ್ವಹಣೆ : ಶ್ರೀ ಎನ್. ಶಿವಣ್ಣ

---

೬–೧–೨೦೧೯ ಮಧ್ಯಾಹ್ನ ೩–೧೫ ರಿಂದ ೪–೦೦

## ಬಹಿರಂಗ ಅಧಿವೇಶನ

ಅಧ್ಯಕ್ಷತೆ : **ಡಾ. ಮನು ಬಳಿಗಾರ್,** ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಸ್ವಾಗತ : ಶ್ರೀ ವ.ಚ. ಚನ್ನೇಗೌಡ, ನಿರ್ಣಯ ಮಂಡನೆ : ಶ್ರೀ ಪಿ. ಮಲ್ಲಿಕಾರ್ಜುನಪ್ಪ, ವಂದನಾರ್ಪಣೆ : ಡಾ. ರಾಜಶೇಖರ ಹತಗುಂದಿ,

ನಿರೂಪಣೆ : ಡಾ. ರಾಜಶೇಖರ ಇಚ್ಚಂಗಿ

---

೬–೧–೨೦೧೯ ಭಾನುವಾರ ಸಂಜೆ ೪–೧೫ ರಿಂದ ೬–೩೦

## ಸಮಾರೋಪ ಸಮಾರಂಭ

**ಗೌರವ ಅತಿಥಿಗಳು**

**ಶ್ರೀ ಸಿದ್ದರಾಮಯ್ಯ**
ಮಾನ್ಯ ಮಾಜಿ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

**ಶ್ರೀ ಡಿ.ವಿ. ಸದಾನಂದಗೌಡ**
ಮಾನ್ಯ ಯೋಜನೆ, ಸಾಂಖ್ಯಿಕ ಹಾಗೂ ರಸಗೊಬ್ಬರ
ಖಾತೆ ಸಚಿವರು, ಕೇಂದ್ರ ಸರ್ಕಾರ

| | | |
|---|---|---|
| ಸಮಾರೋಪ ಭಾಷಣ | : | **ಡಾ. ಹಂಪ ನಾಗರಾಜಯ್ಯ,** ಹಿರಿಯ ವಿದ್ವಾಂಸರು |
| ಗೌರವ ಉಪಸ್ಥಿತಿ | : | **ಡಾ. ಚನ್ನವೀರ ಕಣವಿ,** ಖ್ಯಾತ ಕವಿಗಳು |
| ಸಮ್ಮೇಳನಾಧ್ಯಕ್ಷರ ನುಡಿ | : | **ಡಾ. ಚಂದ್ರಶೇಖರ ಕಂಬಾರ,** ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು |
| ಅಧ್ಯಕ್ಷತೆ | : | **ಡಾ. ಮನು ಬಳಿಗಾರ್,** ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು |

**ಮುಖ್ಯ ಅತಿಥಿಗಳು**

**ಶ್ರೀ ಪಿ.ಎ. ಮೇಘಣ್ಣವರ**
ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ

**ಡಾ. ಮಲ್ಲಿಕಾ ಘಂಟಿ**
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಅತಿಥಿಗಳು**

**ಶ್ರೀ ಎನ್. ವಜ್ರಕುಮಾರ್,** ಕಾರ್ಯದರ್ಶಿಗಳು, ಜನತಾ ಶಿಕ್ಷಣ ಸಮಿತಿ, ಧಾರವಾಡ
**ಶ್ರೀ ಶಿವಾನಂದ ಕರಿಗಾರ್,** ಉಪಾಧ್ಯಕ್ಷರು, ಜಿಲ್ಲಾಪಂಚಾಯತ್, ಧಾರವಾಡ
**ಶ್ರೀಮತಿ ರೇಣುಕಾ ಹುರಳಿ,** ಉಪ ಮಹಾಪೌರರು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಸ್ವಾಗತ : ಡಾ. ಪದ್ಮರಾಜ ದಂಡಾವತಿ, ನಿರೂಪಣೆ : ಶ್ರೀ ರವಿ ಕುಲಕರ್ಣಿ, ವಂದನಾರ್ಪಣೆ : ಡಾ. ಲಿಂಗರಾಜ ರು. ಅಂಗಡಿ, ನಿರ್ವಹಣೆ : ಪ್ರೊ. ಎಸ್.ಎಸ್. ದೊಡಮನಿ

# ಸಮಾನಾಂತರ ವೇದಿಕೆ – ೧ ರೈತರ ಜ್ಞಾನಾಭಿವೃದ್ಧಿ ಕೇಂದ್ರ ಸಭಾಂಗಣ

## ಡಾ. ಶಂ.ಬಾ. ಜೋಶಿ ವೇದಿಕೆ

## ಡಾ. ಎಸ್.ಎಸ್. ಭೂಸನೂರಮಠ ಮಹಾಮಂಟಪ

## ರೆವೆರೆಂಡ್ ಎಫ್. ಕಿಟೆಲ್ ದ್ವಾರ

ಗೋಷ್ಠಿ – ೧ : ೪–೧–೨೦೧೯ ಶುಕ್ರವಾರ ಮಧ್ಯಾಹ್ನ ೨.೪೫ ರಿಂದ ೪–೪೫

### ಕನ್ನಡ ಕಟ್ಟುವಿಕೆ : ಸಾಂಸ್ಥಿಕ ಸಾಧನೆಗಳು ಮತ್ತು ನಿರೀಕ್ಷೆಗಳು

ಅಧ್ಯಕ್ಷತೆ : ಡಾ. ಸಂಗಮೇಶ ಸವದತ್ತಿಮಠ

ಉಪನ್ಯಾಸಕರು

| | |
|---|---|
| ಶ್ರೀ ಈರಪ್ಪ ಎಂ. ಕಂಬಳಿ | ವಿಷಯ : ಸರ್ಕಾರಿ ಸಂಸ್ಥೆಗಳು |
| ಡಾ. ಜಿ.ಎಂ. ಹೆಗಡೆ | ವಿಷಯ : ಅನುದಾನಿತ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳು |
| ಡಾ. ನಾ. ಮೊಗಸಾಲೆ | ವಿಷಯ : ಖಾಸಗಿ ಸಂಸ್ಥೆಗಳು |
| ಡಾ. ಎ.ವಿ. ನಾವಡ | ವಿಷಯ : ಕ್ರೈಸ್ತ ಮಿಷನರಿಗಳ ಕೊಡುಗೆ |

ಸ್ವಾಗತ : ಶ್ರೀ ಸುಬ್ರಹ್ಮಣ್ಯ ವಿ. ಭಟ್, ನಿರೂಪಣೆ : ಶ್ರೀ ರವಿ ಕೊಟಾರಗಸ್ತಿ, ವಂದನಾರ್ಪಣೆ : ಪ್ರೊ. ಎಚ್.ಬಿ. ಶಿವಕುಮಾರ್, ನಿರ್ವಹಣೆ : ಶ್ರೀ ಬಿ.ಎ. ಧರಣೇಶ್

ಗೋಷ್ಠಿ – ೨ : ೪–೧–೨೦೧೯ ಸಂಜೆ ೪–೪೫ ರಿಂದ ೬–೩೦

### ಮರು ಓದು : ಪ್ರಾಚೀನ ಹಾಗೂ ಮಧ್ಯಕಾಲೀನ ಸಾಹಿತ್ಯ

ಅಧ್ಯಕ್ಷತೆ : ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್

ಉಪನ್ಯಾಸಕರು

| | |
|---|---|
| ಡಾ. ವಿಜಯಕುಮಾರಿ ಕರಿಕಲ್ | ವಿಷಯ : ಆಂಡಯ್ಯನ ಕಬ್ಬಿಗರ ಕಾವ |
| ಡಾ. ಬಸವರಾಜ ಕಲ್ಗುಡಿ | ವಿಷಯ : ಶೂನ್ಯ ಸಂಪಾದನೆ (ಭಿನ್ನ ಆವೃತ್ತಿಗಳು) |
| ಡಾ. ಪ್ರಸನ್ನ ಎ.ವಿ. | ವಿಷಯ : ಕುಮಾರವ್ಯಾಸನ ಕರ್ನಾಟಭಾರತ ಕಥಾಮಂಜರಿ |

ಸ್ವಾಗತ : ಶ್ರೀ ಕೊಡಗು ಗಣೇಶ್, ನಿರೂಪಣೆ : ಶ್ರೀ ಬಸವರಾಜ ಅರಬಗಟ್ಟ, ವಂದನಾರ್ಪಣೆ : ಶ್ರೀ ನಾ. ಶ್ರೀಧರ, ನಿರ್ವಹಣೆ : ಶ್ರೀಮತಿ ಭಾರತಿ ಪ್ರಕಾಶ್

### ಸಾಂಸ್ಕೃತಿಕ ಕಾರ್ಯಕ್ರಮ ಸಂಜೆ ೬–೩೦ ರಿಂದ

ಉದ್ಘಾಟನೆ : ಡಾ. ನಾಗತಿಹಳ್ಳಿ ಚಂದ್ರಶೇಖರ್

ನಿರೂಪಣೆ : ಶ್ರೀಮತಿ ಬಿ.ಜೆ.ಜಿ. ಸತ್ಯಶ್ರೀ, ಸ್ವಾಗತ : ಶ್ರೀ ಮ. ಚಂದ್ರಶೇಖರ, ವಂದನಾರ್ಪಣೆ : ಶ್ರೀ ಅಶೋಕ ಮುಧೋಳ, ನಿರ್ವಹಣೆ : ಶ್ರೀ ರುದ್ರೇಶ್ ಜೆ.ಎಚ್.

ಗೋಷ್ಠಿ – ೩ : ೫–೧–೨೦೧೯ ಶನಿವಾರ ಬೆಳಿಗ್ಗೆ ೯–೪೫ ರಿಂದ ೧೧–೩೦

### ಮರು ಚಿಂತನೆ : ಆಧುನಿಕ ಸಾಹಿತ್ಯ

ಅಧ್ಯಕ್ಷತೆ : ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ

ಉಪನ್ಯಾಸಕರು

| | |
|---|---|
| ಪ್ರೊ. ರಾಘವೇಂದ್ರ ಪಾಟೀಲ | ವಿಷಯ : ಗುಲ್ವಾಡಿ ವೆಂಕಟರಾವ್ : ಕಾದಂಬರಿಗಳು |
| ಡಾ. ಶಾಂತಿನಾಥ ದಿಬ್ಬದ | ವಿಷಯ : ಮಿರ್ಜಿ ಅಣ್ಣಾರಾಯ : ಸಮಗ್ರ ವಾಙ್ಮಯ |
| ಡಾ. ಬಸವರಾಜ ಸಾದರ | ವಿಷಯ : ಬಸವರಾಜ ಕಟ್ಟಿಮನಿ : ಕಾದಂಬರಿಗಳು |

ಸ್ವಾಗತ: ಶ್ರೀ ಎಂ. ಚಂದ್ರಶೇಖರ, ನಿರೂಪಣೆ : ಡಾ. ರುದ್ರೇಶ್ ಬಿ. ಅದರಂಗಿ, ವಂದನಾರ್ಪಣೆ :ಶ್ರೀ ಎಚ್. ಮುನಾಫ್, ನಿರ್ವಹಣೆ : ಶ್ರೀ ರಫಾಯಲ್ ರಾಜ್

ಗೋಷ್ಠಿ – ೪ : ೫-೧-೨೦೧೯ ಬೆಳಿಗ್ಗೆ ೧೧-೩೦ ರಿಂದ ೧-೧೫

## ವೈಚಾರಿಕತೆ ಮತ್ತು ಅಸಹಿಷ್ಣುತೆ

ಅಧ್ಯಕ್ಷತೆ : ನ್ಯಾ.ಮೂ. ಶ್ರೀ ಎಚ್.ಎನ್. ನಾಗಮೋಹನ್‌ದಾಸ್

ಉಪನ್ಯಾಸಕರು

ಶ್ರೀಮತಿ ಮಾಳವಿಕಾ ಅವಿನಾಶ್ — **ವಿಷಯ :** ಪ್ರಭುತ್ವ ಮತ್ತು ಅಸಹಿಷ್ಣುತೆ

ಡಾ. ಡಿ.ವಿ. ಗುರುಪ್ರಸಾದ — **ವಿಷಯ :** ವೈಚಾರಿಕ ಸಾಹಿತ್ಯ ಮತ್ತು ಕಾನೂನು

ಶ್ರೀಮತಿ ಬಾನು ಮುಷ್ತಾಕ್ — **ವಿಷಯ :** ಏಕರೂಪ ನಾಗರಿಕ ಸಂಹಿತೆಯ ಅವಶ್ಯಕತೆ

ಸ್ವಾಗತ : ಡಾ. ಎಸ್.ಪಿ. ಉಮಾದೇವಿ, ನಿರೂಪಣೆ : ಡಾ. ವಿಷ್ಣುಶಿಂಧೆ, ವಂದನಾರ್ಪಣೆ : ಶ್ರೀಮತಿ ಲಲಿತಾ ಮೇರಿ, ನಿರ್ವಹಣೆ : ಶ್ರೀ ಸು. ಜಗದೀಶ್

ಗೋಷ್ಠಿ – ೫ : ೫-೧-೨೦೧೯ ಮಧ್ಯಾಹ್ನ ೧-೪೫ ರಿಂದ ೩-೩೦

## ವಿಶಿಷ್ಟ ಸಾಹಿತ್ಯ ಪ್ರಭೇದಗಳು

ಅಧ್ಯಕ್ಷತೆ : ಡಾ. ಹೆಚ್.ಎಂ. ಮಹೇಶ್ವರಯ್ಯ

ಉಪನ್ಯಾಸಕರು

ಪೂಜ್ಯಶ್ರೀ ಅಕ್ಕ ಅನ್ನಪೂರ್ಣತಾಯಿ, ಬೀದರ್ — **ವಿಷಯ :** ಸ್ವರ ವಚನಗಳು

ಡಾ. ಶಿವಾನಂದ ವಿರಕ್ತಮಠ — **ವಿಷಯ :** ರಿವಾಯತ್‌ಗಳು ಮತ್ತು ಲಾವಣಿಗಳು

ಡಾ. ನಟರಾಜ ಬೂದಾಳು — **ವಿಷಯ :** ತತ್ವಪದಗಳು

ಸ್ವಾಗತ : ಶ್ರೀ ನೀ. ಶ್ರೀಶೈಲ, ನಿರೂಪಣೆ : ಶ್ರೀ ವೈ.ಬಿ.ಎಚ್. ಜಯದೇವ, ವಂದನಾರ್ಪಣೆ : ಶ್ರೀ ಶಂಕರ ಹೂಗಾರ, ನಿರ್ವಹಣೆ : ಶ್ರೀ ಬಿ.ಎಚ್. ಸತೀಶ್‌ಗೌಡ

೫-೧-೨೦೧೯ ಮಧ್ಯಾಹ್ನ ೩-೩೦ ರಿಂದ ೫-೦೦

## ಸನ್ಮಾನ ಸಮಾರಂಭ

ಸನ್ಮಾನಿಸುವವರು : **ಡಾ. ಪ್ರಮೋದ್ ಗಾಯಿ**, ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ

ಅಧ್ಯಕ್ಷತೆ : **ಡಾ. ಮನು ಬಳಿಗಾರ್,** ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ವಿಶೇಷ ಉಪಸ್ಥಿತಿ

**ಡಾ. ದೊಡ್ಡರಂಗೇಗೌಡ**
ಹಿರಿಯ ಸಾಹಿತಿಗಳು

**ಶ್ರೀ ಎಸ್. ಷಡಕ್ಷರಿ**
ಖ್ಯಾತ ಅಂಕಣಕಾರರು

**ಸನ್ಮಾನಿತರು :** ವಿದ್ವಾನ್ ಆರ್.ಕೆ. ಪದ್ಮನಾಭ , ಶ್ರೀಮತಿ ಪ್ರೇಮಕ್ಕ ಬಿಂಕದಕಟ್ಟಿ, ಪ್ರೊ. ಸ.ನ. ವಿಶ್ವೇಶ್ವರಯ್ಯ, ಶ್ರೀ ಪಾಲಾಕ್ಷ ಬಿ. ಬಾಣದ, ಶ್ರೀ ವೆಂಕಪ್ಪ ಅಂಬಾಜಿ ಸುಗತೇಕರ, ಡಾ. ಟಿ.ಕೆ. ಕೆಂಪೇಗೌಡ, ಶ್ರೀ ಸುಂದ್ರಪ್ಪ ಪಿ., ಡಾ. ವಿ.ಸಿ. ಐರಸಂಗ, ಶ್ರೀ ಡಿ.ಎನ್. ಹರಿದಾಸ್, ಶ್ರೀ ಎಂ. ಸತೀಶಕುಮಾರ, ಶ್ರೀ ಡಿ. ಪ್ರಕಾಶ್, ಶ್ರೀ ಇದ್ದಿಲ ನಾರಾಯಣರೆಡ್ಡಿ, ಶ್ರೀ ರಂಗನಾಥ ರಾಮಚಂದ್ರರಾವ್ ಆಂಧ್ರಪ್ರದೇಶ, ಶ್ರೀ ಚಂದ್ರಕಾಂತ ಎನ್. ಭಂಡಾರಿ, ಶ್ರೀ ವಿರೂಪಾಕ್ಷಪ್ಪ ಪೂಲಭಾವಿ, ಶ್ರೀ ಮಾಂಬಾಡಿ ಸುಬ್ರಹ್ಮಣ್ಯ ಭಟ್, ಶ್ರೀ ಎನ್.ಹೆಚ್. ರಾಜು, ಶ್ರೀಮತಿ ಶಾರದಾ ಭಟ್ಟ, ಡಾ. ಕೆ. ರಘುರಾಂ, ಶ್ರೀ ವಿಷ್ಣು ಆಸ್ರ. ಯು, ಶ್ರೀ ಮಲ್ಲಣ್ಣ, ಶ್ರೀ ಬಿ.ಎಂ. ತಿಪ್ಪೇರುದ್ರಸ್ವಾಮಿ, ಶ್ರೀ ಸಿದ್ಧರಾಮ ಸಾತಲಗಾಂವ, ಶ್ರೀ ನಾಗೇಶ್ ಕುಮಾರ್ ಸಿ.ಎಸ್., ಶ್ರೀ ಹರಿದಾಸ ಬಿ.ಸಿ. ರಾವ್, ಶ್ರೀ ಮಹಾಂತೇಶ ಗಜೇಂದ್ರಗಡ, ಪ್ರೊ. ಎಸ್.ಆರ್. ದೇವಪ್ರಕಾಶ್ , ಡಾ. ಕೆ.ಪಿ. ಹೆಗ್ಡೆ, ಶ್ರೀ ಹ.ಮಾ. ರಾಮಚಂದ್ರ, ಶ್ರೀ ಐ.ಕೆ. ಕಮ್ಮಾರ, ಶ್ರೀ ಚಿನ್ನಪ್ಪ ಮುರಿಗೆಪ್ಪ ಖೇಣೇದ್, ಶ್ರೀ ಡಿ.ಎಸ್. ಗುಡ್ಡೋಡಗಿ, ಶ್ರೀ ಸಿದ್ದಪ್ಪ ನೇಗಿಲಾಲ, ಶ್ರೀ ಟಿ. ಲಕ್ಷ್ಮಣ.

ಸ್ವಾಗತ : ಡಾ. ಜಿನದತ್ತ ಹಡಗಲಿ, ನಿರೂಪಣೆ : ಡಾ. ಸಿ. ನಂದಿನಿ, ವಂದನಾರ್ಪಣೆ : ಶ್ರೀ ಪಂಪಯ್ಯಸ್ವಾಮಿ ಸಾಲಿಮಠ, ನಿರ್ವಹಣೆ : ಶ್ರೀ ಗಂಗಾಧರ ಪಂಡಿತ

**ಗೋಷ್ಠಿ – ೬ : ೫–೧–೨೦೧೯ ಸಂಜೆ ೫–೦೦ ರಿಂದ ೭–೦೦**

**ಕವಿಗೋಷ್ಠಿ-೨ :** ಆಶಯ ಭಾಷಣ : **ಡಾ. ಸರಜೂ ಕಾಟ್ಕರ್** **ಅಧ್ಯಕ್ಷತೆ : ಡಾ. ಮೂಡ್ನಾಕೂಡು ಚಿನ್ನಸ್ವಾಮಿ**

**ಭಾಗವಹಿಸುವ ಕವಿ, ಕವಯತ್ರಿಯರು :** ಶ್ರೀ ಕೆ.ಬಿ. ತಳಗೇರಿ, ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಶ್ರೀ ಚನ್ನಬಸಪ್ಪ ಚೌಗಲಾ ಗೋವಾ, ಶ್ರೀಮತಿ ಎಸ್.ಎನ್. ಚಂದ್ರಕಲಾ ಕೊಪ್ಪ , ಡಾ. ಪುಟ್ಟೇಶ್ ಸಿ., ಶ್ರೀ ಸಂಜೀವ ಕುಮಾರ್ ಅತಿವಾಳೆ, ಪ್ರೊ. ಓಂಪ್ರಕಾಶ ಧಡ್ಡೆ, ಶ್ರೀ ಅಪ್ಪಾಸಾಹೇಬ ಅಲಿಬಾದಿ, ಶ್ರೀ ಮುದಿಗೆರೆ ರಮೇಶ್‌ಕುಮಾರ್, ಶ್ರೀ ಬಸವರಾಜ ಗಾರ್ಗಿ, ಶ್ರೀಮತಿ ಸುಜಾತ ವಿಶ್ವನಾಥ್, ಶ್ರೀ ಎನ್.ಕೆ. ಮಂಜುನಾಥ, ಶ್ರೀ ಎಚ್.ಕೆ. ರುದ್ರಸ್ವಾಮಿ ಹರ್ತಿಕೋಟೆ, ಶ್ರೀ ಈರಣ್ಣ ಬೆಂಗಾಲಿ, ಶ್ರೀ ವೆಂಕಟೇಶ್ ಇನಾಮದಾರ್, ಶ್ರೀಮತಿ ಶ್ರೀವಿಜಯ ಹಾಸನ, ಶ್ರೀ ಮಹೇಶ್ ಆರ್. ನಾಯಕ್, ಶ್ರೀ ಎ.ಎಸ್. ಮಕಾನದಾರ, ಡಾ. ಎಸ್. ಬಾಲಾಜಿ, ಶ್ರೀ ಶ್ರೀಧರ ರಾಯಸಂ, ಡಾ. ಮುಮ್ತಾಜ್ ಬೇಗಂ ಗಂಗಾವತಿ, ಶ್ರೀ ಅಮರೇಶ್ ಮರಸೂರು, ಶ್ರೀಮತಿ ಶೀಲಾ ನಟರಾಜ್, ಶ್ರೀ ಸುಂದರ ಬಂಗೇರ, ಶ್ರೀ ಚಿಕ್ಕಲಿಂಗೇಗೌಡ ಎಲ್., ಡಾ. ಅಪ್ಪಾಜಿಗೌಡ, ಶ್ರೀ ಹೊ.ನ. ನೀಲಕಂಠೇಗೌಡ, ಶ್ರೀ ಕೆ.ಎಂ. ಶೈಲೇಶ್ ಕಾಕೋಳು, ಶ್ರೀ ವಿಜಯಕುಮಾರ್ ರೋಣದ್, ಶ್ರೀ ಕೆ.ಆರ್. ರವಿಕಿರಣ್, ಶ್ರೀ ಟಿ. ಗುರುರಾಜ್ ಆಚಾರ್, ಶ್ರೀ ಉಗಮ ಶ್ರೀನಿವಾಸ್, ಶ್ರೀ ರೋಷನ್ ಘೋಪ್ರ, ಶ್ರೀ ವೀರಬಸವಂತಪ್ಪ ಎಂ. ಥಾಲಬಾವಡಿ, ಶ್ರೀ ಶಿರೋಳಮಠ, ಶ್ರೀ ಮಧು ಬಿಲ್ಲಿನಕೋಟೆ, ಶ್ರೀ ಹಜರತ ಅಲಿ ದೇಗಿನಾಳ, ಡಾ. ಟಿ. ಗೋವಿಂದರಾಜು.

**ಸ್ವಾಗತ : ಪ್ರೊ. ಎನ್.ಆರ್. ಬಾಳಿಕಾಯಿ, ನಿರೂಪಣೆ : ಶ್ರೀಮತಿ ಸರ್ವಮಂಗಳಾ ಅರಳಿಮಟ್ಟಿ, ವಂದನಾರ್ಪಣೆ : ಶ್ರೀಮತಿ ನಿರ್ಮಲಾ ಶೆಟ್ಟರ್, ನಿರ್ವಹಣೆ : ಶ್ರೀ ಪ್ರಕಾಶ್ ಅಂಗಡಿ**

---

**ಗೋಷ್ಠಿ – ೭ : ೬–೧–೨೦೧೯ ಭಾನುವಾರ ಬೆಳಗ್ಗೆ ೯–೪೫ ರಿಂದ ೧೧–೩೦**

## ಕರ್ನಾಟಕ ಮೌಖಿಕ ಪರಂಪರೆ

**ಅಧ್ಯಕ್ಷತೆ : ಡಾ. ಡಿ.ಬಿ. ನಾಯಕ್** **ವಿಷಯ :** ಸಾಂಪ್ರದಾಯಿಕ ಜನಪದ ಗೀತೆಗಳು ಮತ್ತು ಆಚರಣೆಗಳು

**ಉಪನ್ಯಾಸಕರು**

**ಡಾ. ಪಿ.ಕೆ. ರಾಜಶೇಖರ** **ವಿಷಯ :** ಮೌಖಿಕ ಮಹಾಕಾವ್ಯಗಳು : ಹಾಲುಮತ ಮತ್ತು ಮಂಟೇಸ್ವಾಮಿ ಮಹಾಕಾವ್ಯಗಳು

**ಡಾ. ವಿ.ಎಸ್. ಮಾಳಿ** **ವಿಷಯ :** ಜನಪದ ನೃತ್ಯಗಳು ಹಾಗೂ ಸಂಬಂಧಿತ ಪುರಾಣಗಳು : ಡೊಳ್ಳು ಕುಣಿತ(ಪುರಾಣ), ವೀರಗಾಸೆ(ಪುರಾಣ)

**ಸ್ವಾಗತ : ಶ್ರೀ ಬಿ. ಭದ್ರೇಗೌಡ, ನಿರೂಪಣೆ : ಶ್ರೀ ಎಸ್.ಎನ್. ಅಶೋಕಕುಮಾರ, ವಂದನಾರ್ಪಣೆ : ಶ್ರೀ ಆರ್.ಕೆ. ಬಾಗವಾನ, ನಿರ್ವಹಣೆ : ಶ್ರೀಮತಿ ವಿಶ್ವೇಶ್ವರಿ ಹಿರೇಮಠ**

---

**ಗೋಷ್ಠಿ – ೮ : ೬–೧–೨೦೧೯ ಮಧ್ಯಾಹ್ನ ೧೧–೩೦ ರಿಂದ ೧–೧೫**

## ಕೃಷಿ ಕ್ಷೇತ್ರ : ಸವಾಲುಗಳು

**ಅಧ್ಯಕ್ಷತೆ : ಡಾ. ಎಸ್.ಎ. ಪಾಟೀಲ,** ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ

**ಉಪನ್ಯಾಸಕರು**

**ಶ್ರೀ ಆನಂದತೀರ್ಥ ಪ್ಯಾಟಿ** **ವಿಷಯ :** ಪರ್ಯಾಯ ಕೃಷಿ ವಿಧಾನಗಳು

**ಶ್ರೀ ಮಾರುತಿ ಮಾನ್ಪಡೆ** **ವಿಷಯ :** ಸಮಗ್ರ ಕೃಷಿನೀತಿಯ ಜರೂರು

**ಶ್ರೀ ಎಸ್.ಬಿ. ಮನಗೂಳಿ** **ವಿಷಯ :** ಸಾಲಮನ್ನಾ : ಸಾಧಕ–ಬಾಧಕಗಳು

**ಸ್ವಾಗತ : ಶ್ರೀ ಪ್ರಕಾಶ್ ಗಿರಿಮಲ್ಲನವರ, ನಿರೂಪಣೆ : ಶ್ರೀಮತಿ ಅಮೃತಾ ಮಡಿವಾಳರ, ವಂದನಾರ್ಪಣೆ : ಶ್ರೀ ರಾಘವೇಂದ್ರ ಬಳ್ಳಾರಿ, ನಿರ್ವಹಣೆ : ಶ್ರೀ ಎಂ.ಕೆ. ರಂಗಪ್ಪ**

---

**ಗೋಷ್ಠಿ – ೯ : ೬–೧–೨೦೧೯ ಮಧ್ಯಾಹ್ನ ೨–೦೦ ರಿಂದ ೩–೪೫**

## ಸಂಕೀರ್ಣ

**ಅಧ್ಯಕ್ಷತೆ : ಶ್ರೀ ನಾಗೇಶ ಹೆಗಡೆ**

**ಉಪನ್ಯಾಸಕರು**

**ಡಾ. ಎಂ. ವೆಂಕಟಸ್ವಾಮಿ** **ವಿಷಯ :** ಪ್ರಾಕೃತಿಕ ವಿಕೋಪ : ಎದುರಾಗಿರುವ ಹೊಸ ಸವಾಲು / ನಿರ್ವಹಣೆ

**ಶ್ರೀ ಎನ್.ಎ.ಎಂ. ಇಸ್ಮಾಯಿಲ್** **ವಿಷಯ :** ಸಾಮಾಜಿಕ ಜಾಲತಾಣ(ಸೋಶಿಯಲ್ ಮೀಡಿಯಾ) : ಅವಕಾಶಗಳು ಮತ್ತು ಸವಾಲುಗಳು

**ಡಾ. ನಾ. ಸೋಮೇಶ್ವರ** **ವಿಷಯ :** ವೈದ್ಯ ಸಾಹಿತ್ಯ

**ಸ್ವಾಗತ : ಶ್ರೀ ಮುರಳಿಕೃಷ್ಣ ಬೇಲಾಳು, ನಿರೂಪಣೆ : ಶ್ರೀ ಎಸ್.ಐ. ಬಾವಿಕಟ್ಟಿ, ವಂದನಾರ್ಪಣೆ: ಶ್ರೀ ಕೆ.ಎಂ. ರೇವಣ್ಣ, ನಿರ್ವಹಣೆ : ಶ್ರೀ ಕೆ.ಎಸ್. ಪ್ರಭುಸ್ವಾಮಿ**

## ಸಮಾನಾಂತರ ವೇದಿಕೆ – ೨ ಪ್ರೇಕ್ಷಾಗೃಹ ಸಭಾಂಗಣ

### ಡಾ. ಡಿ.ಸಿ. ಪಾವಟೆ ವೇದಿಕೆ
### ಡಾ. ಸರೋಜಿನಿ ಮಹಿಷಿ ಮಹಾಮಂಟಪ
### ಡಾ. ಗಿರಡ್ಡಿ ಗೋವಿಂದರಾಜ ದ್ವಾರ

ಗೋಷ್ಠಿ – ೧ : ೫–೧–೨೦೧೯ ಶನಿವಾರ ಬೆಳಗ್ಗೆ ೯–೪೫ ರಿಂದ ೧೧–೩೦

**ಮಕ್ಕಳ ಸಾಹಿತ್ಯ**

ಅಧ್ಯಕ್ಷತೆ : ಡಾ. ಟಿ.ಎಸ್. ನಾಗರಾಜ ಶೆಟ್ಟಿ

ಉಪನ್ಯಾಸಕರು

ಡಾ. ಬಸು ಬೇವಿನಗಿಡದ — ವಿಷಯ : ಮಕ್ಕಳ ಸಾಹಿತ್ಯ : ಮಾನವೀಯ ಮೌಲ್ಯಗಳು

ಡಾ. ರಾಜೇಂದ್ರ ಎಸ್. ಗಡಾದ — ವಿಷಯ : ಮಕ್ಕಳ ಸಾಹಿತ್ಯ : ಪ್ರಕಟಣೆ ಮತ್ತು ಪ್ರಚಾರದ ಸಮಸ್ಯೆಗಳು

ಡಾ. ಆನಂದ ಪಾಟೀಲ — ವಿಷಯ : ಜಾಗತಿಕ ಮಟ್ಟದ ಮಕ್ಕಳ ಸಾಹಿತ್ಯ ಮತ್ತು ಕನ್ನಡದ ಮಕ್ಕಳು

ಸ್ವಾಗತ : ಶ್ರೀ ಸಿದ್ದಯ್ಯ, ನಿರೂಪಣೆ : ಶ್ರೀಮತಿ ಸವಿತಾ ಶಿವಕುಮಾರ್, ವಂದನಾರ್ಪಣೆ : ಶ್ರೀ ನೇ.ಭ. ರಾಮಲಿಂಗಶೆಟ್ಟಿ, ನಿರ್ವಹಣೆ : ಶ್ರೀ ಪ. ಗಜಣ್ಣ

ಗೋಷ್ಠಿ – ೨ : ೫–೧–೨೦೧೯ ಬೆಳಗ್ಗೆ ೧೧–೩೦ ರಿಂದ ೧–೧೫

**ಧಾರವಾಡ ಜಿಲ್ಲಾ ದರ್ಶನ**

ಅಧ್ಯಕ್ಷತೆ : ಡಾ. ಗುರುಲಿಂಗ ಕಾಪಸೆ

ಉಪನ್ಯಾಸಕರು

ಡಾ. ಶಾಂತರಾಮ ಹೆಗಡೆ — ವಿಷಯ : ಸಂಗೀತ ಕ್ಷೇತ್ರಕ್ಕೆ ಕೊಡುಗೆ

ಡಾ. ಡಿ.ಎಂ. ಹಿರೇಮಠ — ವಿಷಯ : ಹೋರಾಟ ಪರಂಪರೆ

ಡಾ. ಬಾಳಣ್ಣ ಶೀಗಿಹಳ್ಳಿ — ವಿಷಯ : ಶಿಕ್ಷಣ ಕ್ಷೇತ್ರದ ಸಾಧನೆಗಳು

ಸ್ವಾಗತ : ಶ್ರೀಮತಿ ಮಧುಮತಿ ಸಣಕಲ್ಲ, ನಿರೂಪಣೆ : ಶ್ರೀ ರಾಜೇಶ ಹೊಂಗಲ, ವಂದನಾರ್ಪಣೆ : ಡಾ. ನಟರಾಜ ತಲಘಟ್ಟಪುರ, ನಿರ್ವಹಣೆ : ಶ್ರೀಮತಿ ಅನಿತಾ ಹತ್ತಿ

ಗೋಷ್ಠಿ – ೩ : ೫–೧–೨೦೧೯ ಮಧ್ಯಾಹ್ನ ೨–೦೦ ರಿಂದ ೩–೪೫

**ಕರ್ನಾಟಕ ಇತಿಹಾಸ : ನೂತನ ಒಳನೋಟಗಳು**

ಅಧ್ಯಕ್ಷತೆ : ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ

ಉಪನ್ಯಾಸಕರು

ಡಾ. ಲಕ್ಷ್ಮಣ ತೆಲಗಾವಿ — ವಿಷಯ : ಬಖೈರುಗಳ ಕೊಡುಗೆ

ಡಾ. ಎಸ್. ಚಂದ್ರಶೇಖರ — ವಿಷಯ : ವಿಜಯನಗರ ಸಂಸ್ಕೃತಿಯ ಸ್ವರೂಪ

ಡಾ. ಶೀಲಾಕಾಂತ ಪತ್ತಾರ — ವಿಷಯ : ಬಾದಾಮಿ ಚಾಲುಕ್ಯರ ಶಿಲಾಶಾಸನಗಳು

ಸ್ವಾಗತ : ಡಾ. ಸಿ. ನಾಗರಾಜ, ನಿರೂಪಣೆ : ಡಾ. ದಾಕ್ಷಾಯಿಣಿ ಉಡಿಕೇರಿ, ವಂದನಾರ್ಪಣೆ : ಶ್ರೀ ಪಾಲನೇತ್ರ, ನಿರ್ವಹಣೆ : ಶ್ರೀ ರಕ್ಷಿತ್ ಮೋಹನ್

**ಗೋಷ್ಠಿ – ೪ : ೫-೧-೨೦೧೯ ಮಧ್ಯಾಹ್ನ ೩-೪೫ ರಿಂದ ೫-೩೦**

## ರಂಗಭೂಮಿ : ಇತ್ತೀಚಿನ ಪ್ರಯೋಗಗಳು

**ಅಧ್ಯಕ್ಷತೆ : ಶ್ರೀ ಸಿ. ಬಸವಲಿಂಗಯ್ಯ**

**ಉಪನ್ಯಾಸಕರು**

**ಪ್ರೊ. ಲಕ್ಷ್ಮೀ ಚಂದ್ರಶೇಖರ** — **ವಿಷಯ :** ಏಕವ್ಯಕ್ತಿ ಪ್ರಯೋಗ ಮತ್ತು ಆಧುನಿಕ ತಂತ್ರಜ್ಞಾನದ ಬಳಕೆ

**ಡಾ. ರಾಮಕೃಷ್ಣ ಮರಾಠೆ** — **ವಿಷಯ :** ವೃತ್ತಿ ರಂಗಭೂಮಿ : ಇಂದು

**ಶ್ರೀ ಸುಭಾಷ ನರೇಂದ್ರ** — **ವಿಷಯ :** ಇತ್ತೀಚಿನ ಕನ್ನಡ ನಾಟಕಗಳು

**ಸ್ವಾಗತ : ಶ್ರೀ ಮಲ್ಲಿಕಾರ್ಜುನ ಮಹಾಮನೆ, ನಿರೂಪಣೆ : ಶ್ರೀ ಗುಡಿಹಳ್ಳಿ ನಾಗರಾಜ, ವಂದನಾರ್ಪಣೆ : ಶ್ರೀ ನೊಣವಿನಕೆರೆ ರಾಮಕೃಷ್ಣಯ್ಯ, ನಿರ್ವಹಣೆ : ಶ್ರೀ ಎಂ.ಬಿ. ಪವಾಡಶೆಟ್ಟರ**

---

**ಗೋಷ್ಠಿ – ೫ : ೬-೧-೨೦೧೯ ಬೆಳಗ್ಗೆ ೯-೪೫ ರಿಂದ ೧೨-೦೦**

## ಕವಿಗೋಷ್ಠಿ-೩ :

**ಆಶಯ ಭಾಷಣ : ಶ್ರೀ ಎಚ್. ಡುಂಡಿರಾಜ್ ಅಧ್ಯಕ್ಷತೆ : ಪ್ರೊ ಬಿ. ಸುಕನ್ಯಾ**

**ಭಾಗವಹಿಸುವ ಕವಿ, ಕವಯತ್ರಿಯರು :** ಶ್ರೀಮತಿ ವಸುಧಾ ಬಳ್ಳಾರಿ, ಶ್ರೀಮತಿ ಶಕುಂತಲಾ ಭಟ್, ಹಳೆಅಂಗಡಿ, ಶ್ರೀ ಜೀವರಾಜ ಹೆಚ್. ಛತ್ರದ, ಶ್ರೀ ನಿರಂಜನ ದೇವರಮನೆ, ಶ್ರೀ ದಾದಾಪೀರ್, ಶ್ರೀ ಮಹಾಂತೇಶ ಅಣ್ಣಿಗೇರಿ, ಶ್ರೀ ಮಹಾಂತಪ್ಪ ನಂದೂರ, ಶ್ರೀ ರಾಮಚಂದ್ರ ಸಾಗರ, ಶ್ರೀಮತಿ ವಿಭಾ ಪುರೋಹಿತರ, ಶ್ರೀಮತಿ ವೈ.ವಿ. ಯಶೋದ , ಶ್ರೀ ರಾಜಶೇಖರ ಪಾಟೀಲ್, ಶ್ರೀ ಶರಣಪ್ಪ ಬಾಚಲಾಪುರ, ಶ್ರೀಮತಿ ಚೈತ್ರಾ ಬೇವಿನಗಿಡದ, ಶ್ರೀ ಎಂ. ರಾಜು, ಶ್ರೀ ಕಾರಹಳ್ಳಿ ಶ್ರೀನಿವಾಸ್, ಶ್ರೀ ನಾಗರಾಜು ಹೆಚ್.ಎಸ್., ಶ್ರೀ ಗೋವಿಂದರಾಜು, ಶ್ರೀ ವಿರುಪಾಕ್ಷ ಎಂ., ಶ್ರೀಮತಿ ರಜನಿ ಅ. ಜಿರಿಗ್ಯಾಳ, ಶ್ರೀ ಎನ್.ಆರ್. ಕುಲಕರ್ಣಿ, ಶ್ರೀ ವಿಶಾಲಕುಮಾರ ಸಿಂಧೆ, ಶ್ರೀ ಸುಜಯೀಂದ್ರ ಹಂದೆ ಎಚ್., ಶ್ರೀ ಸುಬ್ರಾಯ ಮತ್ತಿಹಳ್ಳಿ, ಡಾ. ಕೆ.ಪಿ. ನಟರಾಜು, ಶ್ರೀಮತಿ ಅನುಪಮಾ ಪ್ರಸಾದ್, ಶ್ರೀ ಗಂಗಾಧರ ಬಿ.ಎಲ್. ನಿಟ್ಟೂರ್, ಶ್ರೀಮತಿ ಮೇಘ ಗಂಗಾಧರನಾಯ್ಕ, ಪ್ರೊ. ರೇಣುಕಮ್ಮ ಜೆ., ಶ್ರೀ ಸಾ.ಮ. ಶಿವಮಲ್ಲಯ್ಯ, ಶ್ರೀ ದೇವರಾಜ್ ಎಂ.ಆರ್,. ಶ್ರೀ ರಾಮೇಶ್ವರ ಡಾಣಿ, ಶ್ರೀಮತಿ ಎ.ಬಿ. ಶಿವದೇವಿ, ಶ್ರೀಮತಿ ಜಯಶ್ರೀ ಶಶಿಕಾಂತ ಕೆಂಗನಾಳ, ಶ್ರೀಮತಿ ಶ್ವೇತಾ ನಿಹಾಲ್ ಜೈನ್, ಡಾ. ಸಂಪಿಗೆ ನಾಗರಾಜ, ಶ್ರೀಕಾಂತ ಸೂಗಿ, ಶ್ರೀ ರಮೇಶ ಬಾಬು ಯಾಳಗಿ, ಶ್ರೀಮತಿ ವಸಂತ ಸುರೇಂದ್ರನಾಥ್, ಶ್ರೀಮತಿ ಭಾಗ್ಯಲಕ್ಷ್ಮಿ ಇನಾಮತಿ, ಶ್ರೀ ಶರಣಪ್ಪ ಬೇವಿನಕಟ್ಟಿ, ಶ್ರೀ ಕೆ. ಗಿರಿಮಲ್ಲ, ಶ್ರೀ ಶಿವಕಾಂತ ರಡ್ಡಿ, ಶ್ರೀ ಜಿ.ಜಿ. ಬರಡೋಲ, ಡಾ. ಚಿ.ಸಿ. ಲಿಂಗಣ್ಣ, ಶ್ರೀಮತಿ ದಾಕ್ಷಾಯಿಣಿ ಹುಡೇದ, ಶ್ರೀ ರಾಜೇಶ್ ಗುಬ್ಬಿ

**ಸ್ವಾಗತ : ಡಾ. ಅಶೋಕ ನರೋಡೆ, ನಿರೂಪಣೆ : ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ, ವಂದನಾರ್ಪಣೆ : ಶ್ರೀಮತಿ ಎ.ಜಿ. ರತ್ನಾಕಾಳೇಗೌಡ, ನಿರ್ವಹಣೆ : ಶ್ರೀ ಊ.ರ. ನಾಗೇಶ್**

---

**ಗೋಷ್ಠಿ – ೬ : ೬-೧-೨೦೧೯ ಮಧ್ಯಾಹ್ನ ೧೨-೦೦ ರಿಂದ ೧-೩೦**

## ಕಾವ್ಯಪ್ರಚಾರದ ವಿಭಿನ್ನ ನೆಲೆಗಳು

**ಅಧ್ಯಕ್ಷತೆ : ಡಾ. ಟಿ.ಎಸ್. ಸತ್ಯವತಿ** — **ಆಶಯನುಡಿ : ಶ್ರೀ ಬಿ.ಆರ್. ಲಕ್ಷ್ಮಣರಾವ್**

**ಉಪನ್ಯಾಸಕರು**

**ಶ್ರೀ ವೈ.ಕೆ. ಮುದ್ದುಕೃಷ್ಣ** — **ವಿಷಯ :** ಸುಗಮ ಸಂಗೀತ

**ಶ್ರೀಮತಿ ರಾಧಿಕಾ ಕಾಖಂಡಕಿ** — **ವಿಷಯ :** ಶಾಸ್ತ್ರೀಯ ಸಂಗೀತ : ಹಿಂದೂಸ್ತಾನಿ ಮತ್ತು ಕರ್ನಾಟಕ

**ಶ್ರೀಮತಿ ರತ್ನಾಮೂರ್ತಿ (ಎಸ್.ಎಂ. ನಾಗರತ್ನ)** — **ವಿಷಯ :** ಗಮಕ ಮತ್ತು ಕೀರ್ತನೆ

**ಸ್ವಾಗತ : ಡಾ. ಪದ್ಮಾ ಟಿ. ಚಿನ್ಮಯಿ, ನಿರೂಪಣೆ : ಡಾ ರತ್ನಶೀಲಾ ಗುರಡ್ಡಿ, ವಂದನಾರ್ಪಣೆ : ಶ್ರೀ ಎಂ. ತಿಮ್ಮಯ್ಯ, ನಿರ್ವಹಣೆ : ಶ್ರೀ ಬಸವರಾಜ ಮುಡಿಬಾಗಿಲ**

**ದಯಮಾಡಿ ಇದನ್ನೇ ಆಮಂತ್ರಣ ಪತ್ರಿಕೆ ಎಂದು ಭಾವಿಸಬೇಕಾಗಿ ವಿನಂತಿ**